ಮಹಾಮಹಿಮನೂ, ಸರ್ವರಕ್ಷಕನೂ, ಸಕಲ ಜಗತ್ಪರಿಪೂರ್ಣನೂ ಆದ ಜಗದೀಶ್ವರನ ಕರುಣಾರಸದಿಂದಲೂ, ವೈದಿಕ ಧರ್ಮ ಪ್ರಭಾವದಿಂದಲೂ, ನ್ಯಾಯೈಕ ಶೀಲನಾದ ಘನನಂ ಪಡೆದ ನಮ್ಮ ಬ್ರಿಟಿಷ್ ಚಕ್ರಾಧಿಪತ್ಯದಿಂದ ವಿಧಾಯಕವಾದ ಮತ ಸ್ವಾತಂತ್ರ್ಯದಿಂದಲೂ, ಪ್ರಜಾರಂಜಕನಾದ ನಮ್ಮ ಮೈಸೂರು ಶ್ರೀಮನ್ಮಹಾರಾಜರ ರಾಜ್ಯಭಾರ ಕ್ರಮದಿಂದಲೂ, ಇದರಂತೆಯೇ ಬಳೋಡೆ ಮುಂತಾದ ದೇಶೀಯ ಸಂಸ್ಥಾನಾಧಿಪತಿಗಳ ರಾಜಕಾರ್ಯ ಪ್ರಾವೀಣ್ಯತೆಯಿಂದಲೂ, ದೇಶ ಹಿತೈಷಿಗಳಾದ ಶ್ರೀ ರಾಜಾ ರಾಮಮೋಹನರಾಯಿಯನರು, ಸ್ವಾಮಿ ವಿವೇಕಾನಂದರು ಮುಂತಾದ ವಿಶಾಲ ಹೃದಯರ ಸನ್ಮಾರ್ಗೋಪದೇಶಗಳಿಂದಲೂ, ಅಜ್ಞಾನಾಂಧಕಾರದಿಂದಾಚ್ಛಾದಿತವಾದ ಈ ದೇಶದಲ್ಲಿ ಜ್ಞಾನ ಸೂರ್ಯೋದಯವಂ ಗೈಸಿ ಪುನರುದ್ಧರಿಸಿದ ಶ್ರೀಮನ್ಮಹರ್ಷಿ ದಯಾನಂದ ಸರಸ್ವತೀ ಸ್ವಾಮಿಗಳ ಸದ್ಧರ್ಮೋದ್ಘೋಷ ಪ್ರಭಾವದಿಂದಲೂ, ಪ್ರಜೆಗಳೆಚ್ಚೆತ್ತು, ತಮ್ಮ ತಮ್ಮ ಸಾಂಘಿಕ ವ್ಯವಹಾರಗಳನ್ನು ಸಂಸ್ಕರಿಸಿಕೊಳ್ಳಲು ಪ್ರವೃತ್ತರಾದಂತೆಯೇ ಆರ್ಯಕ್ಷತ್ರಿಯ ಜನಾಂಗದವರಾದ ನಾವು ಸಹ, ಮೂವತ್ತು ವರುಷಗಳ ಕೆಳಗಣ ಈ ಸಮಾಜವನ್ನು ಸ್ಥಾಪಿಸಿದೆವಾದರೂ, ಇದು ಕ್ರಮ ಕ್ರಮವಾಗಿ ಸ್ಥಲಾಂತರಗಳನ್ನೂ, ರೂಪಾಂತರಗಳನ್ನೂ ಹೊಂದುತ್ತ "ಶ್ರೇಯಾಂಸಿ ಬಹು ವಿಘ್ನಾನಿ" ಎಂಬಂತೆ ಹಲವು ವಿಘ್ನಗಳಿಗೂ, ಶ್ರಮಗಳಿಗೂ ಒಳಪಟ್ಟರೂ, ಅವೆಲ್ಲವೂ ದಯಾಮಯನಾದ ಪರಮಾತ್ಮನ ಅನುಗ್ರಹದಿಂದ ಪರಿಹಾರವಾಗುತ್ತ ದಿನ ದಿನ ಪ್ರವರ್ಧಮಾನವಂಗಿ, ಈಗ ಚಿತ್ರದುರ್ಗದಲ್ಲಿ "ಆರ್ಯಕ್ಷತ್ರಿಯ ಸಮಾಜ" ವೆಂಬ ಅಭಿದಾನವುಳ್ಳದಾಗಿ ಸರ್ವ ಜನಾದರಣೀಯವೆನಿಸಿ ನೆಲಗೊಂಡಿರುತ್ತದೆಯಾಗಿ ಇದರ ಯಾವಚ್ಚರಿತ್ರಾಂಶವನ್ನೂ ಸಂಗ್ರಹಿಸಿ, ಈ ವಿವೇದಿಕೆಯ ಮೂಲಕ ಸುಜ್ಞರಾದ ತಮ್ಮ್ಮಗಳ ಸಮ್ಮುಖದಲ್ಲಿ ನಿವೇದಿಸಿಕೊಳ್ಳುವೆವು; ಅದೆಂತೆಂದರೆ—

ಈ ಸಮಾಜ ಸ್ಥಾಪನಕ್ಕೆ ಮೂಲ ಪುರುಷರಾದ ಶ್ರೀಯುತ ಆರ್ಯ ನಾರಾಯಣಮೂರ್ತಿಯವರು ಮತ್ತು ಇವರ ಕಾರ್ಯಗಳು:—ಈ ಮಹಾಶಯರು ಅವಂತ

ಪುರದ ಜಿಲ್ಲೆ ಕಲ್ಯಾಣದುರ್ಗದ ತಾಲ್ಲೂಕು ಲಕ್ಷ್ಮಿಂಪಲ್ಲಿಯೆಂಬ ಗ್ರಾಮದಲ್ಲಿ ೧೮೬೬ನೇ ವರುಷದಲ್ಲಿ ಸೌರವೆಂಬ ಕ್ಷತ್ರಿಯ ಕುಲದಲ್ಲಿ ಹುಟ್ಟಿದವರು. ಇವರು ಬಾಲ್ಯದಲ್ಲಿ ತಮ್ಮ ಅಣ್ಣನವರಲ್ಲಿ ವಿದ್ಯಾಭ್ಯಾಸವಂ ಮಾಡುತ್ತಿದ್ದು ೧೨ ವರುಷಗಳ ವಯಸ್ಸಿನವ ರಾದಬಳಿಕ ಸ್ಥಳಾಂತರಗಳಲ್ಲಿ ಸಂಚರಿಸುತ್ತ, ಇತರರಿಂದಲೂ ವಿದ್ಯೆಯನ್ನು ಕಲಿಯು ತ್ತಿದ್ದು ಸ್ವಲ್ಪ ಸ್ವಲ್ಪ ಲೋಕಾನುಭವವಾಗುತ್ತ ಬಂದುದರಿಂದ—ನಮ್ಮ ದೇಶದಲ್ಲಿನ ಜಾತಿಭೇದ ಮತಭೇದಗಳನ್ನೂ, ಆಚಾರ ಭೇದಗಳನ್ನೂ, ಇವರಲ್ಲಿ ಪರಸ್ಪರವುಳ್ಳ ಈರ್ಷ್ಯಾಸೂಯಾದಿಗಳನ್ನೂ, ಅವುಗಳಿಂದ ಜನಳಿಗುಂಟಾಗಿರುವ ನಷ್ಟ ಕಷ್ಟಗಳನ್ನೂ ಕಂಡುಕೊಂಡು, ಇವೆಲ್ಲವನ್ನೂ ಸಾಮರಸ್ಯಕ್ಕೆ ತರುವುದು ಉತ್ತಮ ಕಾರ್ಯವೆಂದು ಭಾವೋದಯವಾದುದರಿಂದ, ಈ ಹಿಂದೂಮತ ವಿಷಯನಾಗಿ ಕೆಲಸ ಮಾಡದೊಡಗಿ, ಬಳ್ಳಾರಿಯಲ್ಲಿ ರಾವ್‌ಬಹದೂರ್ ಸಭಾಪತಿ ಮುದಲಿಯಾರೆಂಬ ಶ್ರೀಮಂತರ ಆಶ್ರಯ ದಲ್ಲಿ ಕೆಲವು ಕಾಲದವರೆಗೆ ಮತೋಪನ್ಯಾಸಕರಾಗಿದ್ದು, ಅದು ತಮ್ಮ ಮನೋರಥ ಸಿ ದ್ಧಿಗೆ ಸಾಕಾದುದಲ್ಲವೆಂದು, ತಿರುಗಿ ತಮ್ಮ ಜನ್ಮಸ್ಥಾನವಂ ಸೇರಲೆಳಸಿ ಹೊರಟು, ಕುಂದುರುಪಿಯೆಂಬ ಗ್ರಾಮವಂ ಸೇರಿ, ೧೮೯೨ನೇ ವರುಷದಲ್ಲಿ "ವಿಜ್ಞಾನವರ್ಧನಿ" ಎಂಬ ಸಮಾಜವನೊಂದನ್ನು ಸ್ಥಾಪಿಸಿ, ಅದೇ ಹೆಸರಿನ ಮಾಸಪತ್ರಿಕೆಯನ್ನು ಹೊರಡಿಸಿ, ಅದಕ್ಕೆ ಸಂಪಾದಕರಾಗಿ, ಮತವಿಷಯಕ ನ್ಯಾಸಗಳನ್ನು ಬರೆಯುತ್ತಿರುವಲ್ಲಿ, ಅಲ್ಲಿನ ಸ್ವಾರ್ಥ ಪರಾಯಣರಾದ ಕೆಲವು ಜನಗಳು ಸಹಿಸಲಾರದೇ ಇವರನ್ನು ಹಲವು ಬಗೆ ಬಾಧಿಸಲಾರಂಭಿಸಿದುದರಿಂದ, ಇವರಾಸ್ಥಲವಂ ಬಿಟ್ಟು ತಮ್ಮ ವಿಜ್ಞಾನವರ್ಧನಿಯೊ ಡನೆ ಕಲ್ಯಾಣದುರ್ಗವಂ ಸೇರಿ ಕೆಲವು ಕಾಲ ಕಳೆದು, ಮೊಟ್ಟಮೊದಲು ತಮ್ಮ ಕ್ಷತ್ರಿ ಯ ವರ್ಗದಲ್ಲಿನ ಬೇರ್ಪೇರೆ ಪಂಗಡದವರನ್ನು ಒಂದಾಗಿ ಸೇರಿಸಬೇಕೆಂದು, ಸೌರರು, ಮಾಗಧರು, ರಾಜುಲು, ಭಟ್ಟರಾಜುಲುಯೆಂಬ ನಾಲ್ಕು ಪಂಗಡಗಳವರನ್ನು ಮೊಳಕಾ ಲ್ಮುರು ತಾಲ್ಲೂಕು ಜೊಮ್ಮಗೊಂಡನಕೆರೆಯೆಂಬ ಗ್ರಾಮದಲ್ಲಿ ೧೮೯೬ನೇ ಇಸವಿ ಜೂ ತಿಂಗಳಲ್ಲಿ ಸಭೆಸೇರಿಸಿ, ಈ ನಾಲ್ಕು ವರ್ಗದವರೂ ಪರಸ್ಪರ ಬಾಂಧವ್ಯ ಸಂಬಂಧಗಳುಳ್ಳ ವರಾಗುವಂತೆ ಒಪ್ಪಿಸಿ, ಅವರಂತೆ ಕೆಲವು ವಿವಾಹಗಳನ್ನು ತಮ್ಮ ಪೌರೋಹಿತ್ಯದಿಂದಲೆ ನೆರವೇರಿಸಿ, ಅವರನ್ನೆಲ್ಲಾ ಒಂದು ಸಾಂಘಿಕರನ್ನಾಗಿ ಮಾಡಿ ಅದಕ್ಕೆ "ಮೂರ್ತಿಮತ್ತ ಸಮಾಜ" ವೆಂಬ ಹೆಸರನಿಟ್ಟು, ಅದರ ಮೂಲಕ "ಮೂರ್ತಿಮತ ಕುಲಾಚಾರ ಪ್ರ ದೀಪಿಕೆ" ಯೆಂಬ ನಿಬಂಧನ ಗ್ರಂಥವನೊಂದನ್ನು ರಚಿಸಿ ಪ್ರಚಾರಪಡಿಸಿದುವಲ್ಲದೇ ಈ ಸಮಾಜವ ನಭಿವೃದ್ಧಿಪಡಿಸಲೋಸುಗ ಸ್ಥಳಾಂತರಗಳಲ್ಲಿ ಸಂಚರಿಸುತ್ತ, ರಾಯದು ರ್ಗದ ಪ್ರಜೆಗಳ ಕೋರಿಕೆಯೆಂತೆ ಅಲ್ಲಿ ನಿಂತು ತಾವು ಕೈಗೊಂಡ ಕಾರ್ಯದಲ್ಲಿ ಪ್ರವೃತ ರಾಗಿದ್ದರು.

ಇಂತಿವರು ಪರಿವರ್ತನನಾದುದನ್ನರಿತ ಕೆಲವರು ಕುಕ್ಷಿಂಭರರೂ, ಇವರ ಕಪ ಟೋಕ್ತಿಗಳಿಗೆಕಿವಿಯೊಗ್ಗಿದ ಮಠಾಧಿಪತಿಗಳು, ಪುರೋಹಿತರು, ಮುಂತಾದವರೆಲ್ಲರೂ

ಒಗ್ಗಟ್ಟಾಗಿ, ಈ ಮೂರ್ತಿಯವರಿಗೂ ಇವರ ಸಾಮಾಜಕರಿಗೂ ಹಲವು ಕಿರುಕುಳಗಳನ್ನು ಮಾಡದೊಡಗಿದುದಲ್ಲದೇ ತಮ್ಮ ಅಭಿಮತಕ್ಕನುಕೂಲನಾದ ಕೆಲವು ವಾರ್ತಾಪತ್ರಿಕೆಗಳಮೂಲಕ ನಾನಾವಿಧಗಳಾಗಿ ದುರಾಕ್ಷೇಪಗಳನ್ನು ಮಾಡುತ್ತ ದುರಾಲಾಪಗಳಾಡಿ ತಮಗುಳ್ಳ ದುರಾಗ್ರಹವಂ ತೀರಿಸಿಕೊಳ್ಳಲಾರಂಭಿಸಿದರು. ಮೂರ್ತಿಯವರು, "ಆಂಧ್ರಕೇಸರಿ" ಯೆಂಬ ಮತ್ತೊಂದು ಮಾಸಪತ್ರಿಕೆಯನ್ನು ಪ್ರಚುರಪಡಿಸಿ, ಅದರ ಮೂಲಕ ಮೇಲ್ಕಂಡವರ ದುರುಕ್ತಿಗಳಿಗೆಲ್ಲಾ ಶಾಸ್ತ್ರಸಮ್ಮತವೂ, ಯುಕ್ತಿಯುಕ್ತವೂ ಆದ ಸಮಾಧಾನಗಳನ್ನು ಬರೆಯುತ್ತ ಸ್ವಸಿದ್ಧಾಂತವನ್ನು ಸ್ಥಿರಪಡಿಸುತ್ತಾ ಬಂದುದರಿಂದ ಮೇಲೆ ಆ ಸ್ವಾರ್ಥಿಗಳೆಲ್ಲರೂ ಒಂದೇಬಾರಿಗೆ "ವಿಭೂಷಣಂ ಮೌನಮು ಪಂಡಿತಾನಾಂ" ಎಂಬ ಆರ್ಷೋಕ್ತಿಯಂತೆ ಸುಮ್ಮನಾದರು.

ಸಂಘಪರಿಷ್ಕರಣ ಕಾರ್ಯಕ್ಕೆ ಬದ್ಧಕಂಕಣರಾದ ಕೀರ್ತಿಶೇಷರಾದ ಕಂದುಕೂರು ವೀರೇಶಲಿಂಗಂ ಪಂತುಲವರು ತಮ್ಮ ವಿವೇಕವರ್ಧನೀ ಪತ್ರಿಕೆಯಮೂಲಕವಾಗಿ—ಮೂರ್ತಿಯವರ ಸಂಘಸಂಸ್ಕರಣ ಕಾರ್ಯವು ಶ್ಲಾಘನೀಯವಾದುದೆಂದು ಉದ್ಘೋಷಿಸಿದರು. ಇದರಂತೆಯೇ ಶ್ರೀಯುತ ತೇಕುಮಳ್ಳ ರಾಜಗೋಪಾಲರಾವ್ ಬಿ. ಎ. ಯವರು ೧೯ನೇ ಶತಾಬ್ದದ ಹಿಂದೂಸಂಘಸಂಸ್ಕಾರ ಚರಿತ್ರೆಯಲ್ಲಿ—ಈ ಸಮಾಜದ ಯಾವದ್ಯತ್ತಾಂತಗಳನ್ನೂ ವಿಶದಪಡಿಸಿ, ಸಮಾಜೋದ್ದೇಶ್ಯಗಳನ್ನು ಅನುಮೋದಿಸಿದರು.

ಅನಂತರದಲ್ಲಿ ಈ ಮೂರ್ತಿಯವರು ಹಿಂದೂಪುರವಾಸಿಗಳ ಅಪೇಕ್ಷೆಯಂತೆ ಅಲ್ಲಿ ನೆಲೆಗೊಂಡು, ಯಥಾಪೂರ್ವಕ ಹಿಂದೂಮತ ವ್ಯಾಪನೆಗೆ ಪರಿಶ್ರಮಿಸುತ್ತ, ಆರ್ಯ ಸಮಾಜ ಪ್ರವರ್ತಕರಾದ ಶ್ರೀ ದಯಾನಂದ ಸರಸ್ವತೀ ಸ್ವಾಮಿಗಳಿಂದಲೂ, ತದನುಯಾಯಿಗಳಾದ ಇತರ ಪಂಡಿತರುಗಳಿಂದಲೂ ವಿರಚಿತಗಳಾದ ಅನೇಕ ಗ್ರಂಥಗಳನ್ನು ತರಿಸಿ ಓದಿದಬಳಿಕ, ನಮ್ಮ ದೇಶದಲ್ಲಿ ಬಳಕೆಯಾಗಿರುವ ಜಾತಿಮತಾದಿ ಭೇದಗಳೆಲ್ಲವೂ ವೇದದ ಅಪ್ರವೃತ್ತಿಯಿಂದಲೂ, ಸ್ವಾರ್ಥಪರರಿಂದ ಕಲ್ಪಿತಗಳಾದ ಪುರಾಣ ಮತದ ಪ್ರವೃತ್ತಿಯಿಂದಲೂ ಉಂಟಾದವೆಂದೂ, ವೇದವೊಂದೇ ಸತ್ಯವೂ ಸನಾತನವೂ ಸರ್ವ ಜನಾಶ್ರಯಣೀಯವೂ ಆದುದೆಂದೂ, ವೇದಮಾರ್ಗವನಾಶ್ರಯಿಸಿದರಲ್ಲದೇ ಮಾನವರಿಗೆ ಶಾಂತಿ ಸುಖ ಸೌಜನ್ಯಾದಿಗಳೂ ಐಕಮತ್ಯವೂ ಜೀನಕಾರುಣ್ಯವೂ ಲಭಿಸದೆಂದೂ ಗ್ರಹಿಸಿ, ಕೆಲವು ಆರ್ಯ ಸಮಾಜೀಯ ಗ್ರಂಥಗಳನ್ನು ಆಂಧ್ರೀಕರಿಸಿ ಪ್ರಚುರಿಸದೊಡಗಿ, ಆ ಪ್ರಾಂತದ ಕ್ಷತ್ರಿಯ ವಂಶಜರನ್ನೂ, ಮೂರ್ತಿಮತ ಪ್ರವರ್ತಕರನ್ನೂ ಬರಮಾಡಿಸಿ, ಮೂರ್ತಿಮತ ಸಮಾಜವೆಂಬುದಕ್ಕೆ ಪ್ರತಿಯಾಗಿ, ಆರ್ಯ ಕ್ಷತ್ರಿಯ ಸಮಾಜವೆಂಬ ಹೆಸರನಿತ್ತು, ಆಪ್ತ ವಿದ್ವಜ್ಜನರ ಸಹಾಯದೊಡನೆ ಕೆಲವು ಬ್ಹಾಲಕರಿಗೆ ಉಪನಯನಗಳನ್ನೂ ಕ್ಷತ್ರಿಯರಲ್ಲೊಂದು ಪಂಗಡದ ಶ್ರೀಯುತ ಸುಖದೇವಶರ್ಮನೆಂಬ ರಜಪೂತ ಯುವಕನಿಗೆ ತಮ್ಮ ಕನ್ಯೆಯನ್ನಿತ್ತು ವೈದಿಕಪದ್ಧತಿ

ಯಂತೆ ವಿವಾಹವಂ ಬೆಳಸಿ, ಇಂತು ಹಿಂದೂಪುರದೊಳು ೧೯೧೬ನೇ ವರುಷದ ಡಿಸೆಂಬರು ೨೬, ೨೮, ೨೯ ತಾರೀಖುಗಳಲ್ಲಿ ಈ ಸಮಾಜದ ಪ್ರಥಮ ವಾರ್ಷಿಕ ಮಹಾ ಸಭೆಯನ್ನು ಜಯಪ್ರದವಾಗಿ ನೆರವೇರಿಸಿದುದಲ್ಲದೇ ಇಂತಹ ಪರಿವರ್ತನಕ್ಕೆ ಆದರ್ಶ ಕರಾಗಿಯೂ, ಅದುಮೊದಲು ಈ ಸಮಾಜದ ಕಾರ್ಯನಿರ್ವಾಹಕ ಸಭೆಯಲೊಬ್ಬ ಸಭಾಸದರಾಗಿಯೂ ವಿರಾಜಿತರಾಗಿರುವುದಕ್ಕಾಗಿ ಈ ಸಾಮಾಜಿಕರೆಲ್ಲರೂ ಈ ಮಹಾ ಶಯರ ವಿಷಯದಲ್ಲಿ ಅತ್ಯಂತ ಕೃತಜ್ಞರಾಗಿರುತ್ತಾರೆ.

ದ್ವಿತೀಯ ವಾರ್ಷಿಕ ಮಹಾಸಭೆಯು.

ಇದು ಕೋಲಾರ ಡಿಸ್ಟ್ರಿಕ್ಟು ಗೋರೀಬಿದನೂರು ತಾಲ್ಲೂಕು ಮರಳೂರಿನಲ್ಲಿ ೧೯೧೭ನೇ ವರುಷದ ಮೇ ೨೬, ೨೭ ಈ ತಾರೀಖುಗಳಲ್ಲಿ ಶ್ರೀಯುತ ಪಂಡಿತ ಅದಿಪೂಡಿ ಸೋಮನಾಥ ರಾಯರವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಮಹಾಸಭೆಯಲ್ಲಿ ಸನಾತನ ವರ್ಣಾಶ್ರಮ ಧರ್ಮೋಪನ್ಯಾಸಗಳೂ ಉಪನಯನ ಸಂಸ್ಕಾರಗಳೂ ಕೆಲವು ಮಾಡಿಸಿ ಆ ಪ್ರಾಂತದಲ್ಲಿ ವೈದಿಕ ಧರ್ಮವನ್ನು ದರ್ಶಯಿಸಲಾಯಿತು.

ತೃತೀಯ ವಾರ್ಷಿಕ ಮಹಾಸಭೆಯು.

ಇದು ಚಿತ್ರದುರ್ಗದಲ್ಲಿ ೧೯೧೮ನೇ ವರುಷದ ಮೇ ೨೬, ೨೭, ೨೮ ಈ ತಾರೀಖುಗಳಲ್ಲಿ ಡೆಪ್ಯುಟಿ ಕಮಿಷನರ್ ಹಜರತ್ ಜಹಿರುದ್ದೀನ್ ಮೆಕ್ಕೈ ಬಿ. ಎ. ಯವರ ಆಶ್ರಯದಲ್ಲಿ ಶ್ರೀಯುತ ಬಿ. ಎಸ್. ವಿಜಯದೇವ ಎಂ. ಎ. ಬ್ಯಾರಿಸ್ಟರ್ ಆಟ್ ಲಾ ಯವರ ಅಧ್ಯಕ್ಷತೆಯಲ್ಲಿ ಸಮಾವೇಶವಾಯಿತು. ಈ ಸಭೆಯಲ್ಲಿ ಸ್ವಯಂವರ ವಿವಾಹವನ್ನೊಂದನ್ನು ಜರಿಗಿಸಲಾಹ್ವಾನಿಸಲ್ಪಟ್ಟಿತ್ತಾದರೂ ನಿರೀಕ್ಷರಾರೂ ಬಾರದೇಹೋದುದರಿಂದ ಅದನ್ನು ನಿಲ್ಲಿಸಿ, ಕ್ಷತ್ರಿಯರೊಳು ರಾಚಾವಾರರೆಂಬ ಪಂಗಡದವರನ್ನು ಈ ಸಮಾಜಕ್ಕೆ ಸೇರಿಸಿಕೊಂಡು ಅವರ ಕನ್ಯೆಯರನ್ನು ಸಮಾಜದಲ್ಲಿನ ಅನ್ಯ ಪಂಗಡದವರಿಗೂ, ಸಮಾಜದವರಲ್ಲಿನ ವರರಿಗೆ ಅವರ ಕನ್ಯೆಯರನ್ನೂ ಕೊಟ್ಟು, ನಮ್ಮ ಮೈಸೂರು ಶ್ರೀಮದ್ಯುವರಾಜರಿಂದನುಗ್ರಹೀತವಾದ ಮೈಸೂರು ಸಿವಿಕ್ ಅಂಡ್ ಸೋಷಿಯಲ್ ಅಸೋಸಿಯೇಷನೆಂಬ ಪದ್ಧತಿಯನನುಸರಿಸಿ ಮಿತ ವ್ಯಯದಲ್ಲಿ ಸಾಲ್ಕು ವಿವಾಹಗಳನ್ನೂ, ನಾಲ್ವರು ಬಾಲಕರಿಗೂ ಬಾಲಕಿಯರೀರ್ವರಿಗೂ ಉಪನಯನಗಳನ್ನೂ ಯಥಾವಿಧಿಯಾಗಿ ನೆರವೇರಿಸಿ, ಮೇಲಿಹೇಳಿದ ಬೇರ್ಬೇರೆ ಪಂಗಡದವರು ಪರಸ್ಪರ ಬಾಂಧವ್ಯ ಸಂಬಂಧಗಳುಳ್ಳವರಾಗುವಂತೆ ಮಾಡಲ್ಪಟ್ಟಿತು. ಈ ಮಹಾ ಸಭೆಗೆ ಮೈಸೂರು ಗೌರ್ನಮೆಂಟಿನ ಹಲವ ಧಿಕಾರಿಗಳನ್ನೂ, ಇತರ ಪ್ರತಿಷ್ಠಿತ ಮಹಾ ಜನರನ್ನೂ ಬರಮಾಡಿಕೊಂಡು, ಧರ್ಮಾ

ನುಷ್ಠಾನ ತತ್ಪರರಾದ ಪಂಡಿತೋತ್ತಮರಿಂದ ಧರ್ಮೋಪನ್ಯಾಸಗಳಂ ಗೈಸಿ ಮನುಷ್ಯ ಮಾತ್ರರೂ ಅಂದರೇ ಸಮಸ್ತ ಸ್ತ್ರೀಯರೂ ಪುರುಷರೂ ವಿದ್ಯೆಯನಾರ್ಜಿಸಿ ವೈದಿಕ ಧರ್ಮವಂ ಪಾಲಿಸತಕ್ಕುದು ಭಾರತೀಯರಿಗೆ ಕರ್ತವ್ಯವೆಂಬುದಂ ಪ್ರದರ್ಶಯಿಸಲಾಯಿತು. ಈ ಸಭೆಯಲ್ಲಿ ಈ ಸಾಮಾಜಿಕಳಾದ ಶ್ರೀಮತಿ ಸರಸ್ವತಮ್ಮನು ಕನ್ನಡಕ್ಕೆ ಪರಿವರ್ತನಮಾಡಿದ "ಸ್ತ್ರೀ ಶೂದ್ರಾಧ್ಯಯನ ವಿಧಿ" ಯೆಂಬ ಉಪನ್ಯಾಸವು ಮುದ್ರಿತವಾಗಿ ಸಭ್ಯಜನರಿಗೆಲ್ಲರಿಗೂ ಉಚಿತವಾಗಿ ಹಂಚಲ್ಪಟ್ಟಿತು. ಈ ಮಹಾ ಸಭೆಯ ಮೂಲಕವಾಗಿ ನಮ್ಮ ಶ್ರೀಮದಿಂಡಿಯಾ ಸಾರ್ವಭೌಮರಿಗೂ ಮತ್ತು ಮೈಸೂರು ಶ್ರೀಮನ್ಮಹಾರಾಜ ಯುವರಾಜ ಪ್ರಭುಗಳೀರ್ವರಿಗೂ ಮತ್ತು ದಕ್ಷಿಣ ಹಿಂದೂದೇಶದಲ್ಲಿನ ಅನೇಕ ರಾಜರುಗಳಿಗೂ, ಮಹಾಧಿಪತಿಗಳಿಗೂ ಶ್ರೇಯಃಪ್ರಾರ್ಥನೆಯಂ ಬಯಸಿ, ಈ ಸಮಾಜೋದ್ದೇಶ್ಯಗಳನ್ನು ಕುರಿತು ಬಿನ್ನಯಿಸಿಕೊಳ್ಳಲ್ಪಟ್ಟಿತು. ಆ ಮಹಾ ಪ್ರಭುಗಳೂ, ಮಹಾ ಸ್ವಾಮಿಗಳೂ, ಈ ವಿಷಯದಲ್ಲಿ ತಮಗುಳ್ಳ ಸಹಾನುಭೂತಿ ಸಂತೋಷಗಳನ್ನು ಕೃಪಾಪತ್ರಗಳ ದೆಸೆಯಿಂದ ಈ ಸಮಾಜಕ್ಕೆ ಪ್ರೋತ್ಸಾಹಕವಾಗಿ ದಯಪಾಲಿಸಿರುವರು. ಇಂತೀ ಮಹಾ ಸಭೆಯು ಜಯಪ್ರದವಾಗಿ ನೆರವೇರಿದುದಲ್ಲದೇ ಅದುಮೊದಲೀ ಸಮಾಜಕ್ಕೆ ಚಿತ್ರದುರ್ಗವೇ ಪ್ರಧಾನ ಸ್ಥಾನವಾಗಿ ನೆಲೆಗೊಳ್ಳಲ್ಪಟ್ಟಿತು.

ಈಜೆಗೆ ನಾಲ್ಕನೇ ಮಹಾಸಭೆ ಜರಗಲವಕಾಶವುಂಟಾಗಲಿಲ್ಲವಾದರೂ ನಮ್ಮ ಸಾಮಾಜಿಕರೊಳು ಧರ್ಮಾನುಷ್ಠಾನಪರರಾದ ಕೆಲವರು ಮಿಳಿತರಾಗಿಯೂ, ಒಬ್ಬೊಬ್ಬರಿಯಾಗಿಯೂ ಇದರಡಿ ವಿವರಿಸಿರುವಂತೆ ಬೇರ್ಬೇರೆಯಾಗಿ ದೇಶಹಿತ ಕಾರ್ಯಗಳಲ್ಲಾಸಕ್ತರಾಗಿ ಸಮಾಜೋದ್ದೇಶ್ಯಗಳನ್ನು ಅನುಷ್ಠಾನಕ್ಕೆ ತಂದವರಾಗಿಯೂ ತರುವರಾಗಿಯೂ ಇರುವುದು ಸಮಾಜದ ಪುರೋವೃದ್ಧಿಗಾಕರವಾಗಿಯೂ ಶ್ಲಾಘಾಪಾತ್ರವಾಗಿಯೂ ಇರುತ್ತವೆ; ಆವಾವೆಂದರೆ:—

I. ಶ್ರೀಯುತ ಕಲ್ಲೂಡಿ ಶ್ರೀಪತಿ ಸೀತಾರಾಮರಾಜರವರು, ಮರಳೂರು ನಾರಾಯಣರಾಜರವರು ಮುಂತಾದ ಕೆಲವರು ಸಾಮಾಜಿಕರು ತಮ್ಮ ತಮ್ಮ ಕುಟುಂಬಗಳೊಡನೆ ಮರಳೂರಿನಲ್ಲಿ ಶ್ರೀಯುತ ಆರ್ಯ ನಾರಾಯಣಮೂರ್ತಿಯವರ ಅಧ್ಯಕ್ಷತೆಯಲ್ಲಿ ೧೯೨೧ನೇ ವರುಷದ ಮೇ ೪ ಮತ್ತು ೫ನೇ ತಾರೀಖುಗಳಲ್ಲಿ ಮರಳೂರಿನಲ್ಲಿ ಸಭೆಮಾಡಿ ಶಾಖಾ ಸಮಾಜವನೊಂದನ್ನು ಸ್ಥಾಪಿಸಿ ಭಗವತ್ಪ್ರಾರ್ಥನಾದಿಗಳನ್ನು ಮಾಡಿ ಆ ಪ್ರಾಂತದ ಸ್ತ್ರೀ ಪುರುಷ ಸಮುದಾಯಕ್ಕೆಲ್ಲಾ ಸಮಾಜದುದ್ದೇಶ್ಯಗಳು ಸಫಲವಾಗುವಂತೆ ಮಾಡಿದುದಲ್ಲದೇ ಮೇಲ್ಕಂಡ ಶ್ರೀಪತಿ ಸೀತಾರಾಮರಾಜರು ಕಲ್ಲೂಡಿನಲ್ಲಿ ಒಂದು ಪಾಠಶಾಲೆಯನ್ನು ಕಟ್ಟಿಸಿ ಅದನ್ನು ವಿದ್ಯಾಭ್ಯಾಸದ ಇಲಾಖೆಗೆ ಒಪ್ಪಿಸಿ ಕೃತಕೃತ್ಯರಾಗಿರುವರು.

II. ಶ್ರೀಯುತ ಎಂ. ಆರ್ಯಮೂರ್ತಿಯೆಂಬ ಈ ಸಾಮಾಜಿಕರೋರ್ವರು

ವಿದ್ಯಾಭ್ಯಾಸದ ಶಾಖೆಯಲ್ಲಿನ ತಮ್ಮ ಉದ್ಯೋಗಸಮಯದಲ್ಲಿ ಹೊರತು ವಿಶ್ರಾಮ ಸಮಯಗಳಲ್ಲಿ "ಅಹಿಂಸಾ ಪರಮೋಧರ್ಮಃ" ಎಂಬ ಆರ್ಯೋಕ್ತಿಯನ್ನು ನೆನಪಿನಲ್ಲಿಟ್ಟು, ದೊಡ್ಡಬಳ್ಳಾಪುರದಲ್ಲಿ "ಜೀವದಯಾ ಪ್ರಚಾರಕ ಸಂಘ" ವನೊಂದನ್ನು ಸ್ಥಾಪಿಸಿ, ಅದಕ್ಕೆ ಸೆಕ್ರೆಟರಿಯರಾಗಿ ಅದರ ಅಭಿವೃದ್ಧ್ಯರ್ಥವಾಗಿ—ಹೈದರಾಬಾದು, ಹುಬ್ಬಳ್ಳಿ, ಬೆಂಗಳೂರು ಡಿಸ್ಟ್ರಿಕ್ಟು ಮುಂತಾದ ಕಡೆ ಆಗಾಗ್ಗೆ ಸಂಚರಿಸಿ, ಜೀವಕಾರುಣ್ಯ ವಿಷಯಗಳನ್ನು ಉಪನ್ಯಸಿಸುತ್ತ, ಜನರಲ್ಲಿ ಪ್ರೀತಿಪಾತ್ರರಾಗಿ, ಸಂಘವನ್ನು ಉಚ್ಛ್ರಾಯ ಸ್ಥಿತಿಗೆ ತಂದುದಲ್ಲದೇ ಈಚೆಗೆ ಚನ್ನಪಟ್ಟಣಕ್ಕೆ ವರ್ಗಾಯಿಸಲ್ಪಟ್ಟರೂ ಅಲ್ಲಿಯೂ ವೈದಿಕ ಧರ್ಮಗಳನ್ನು ಪನ್ಯಸಿಸುತ್ತ, ಜನಗಳನ್ನು ಪ್ರೋತ್ಸಾಹಿಸುತ್ತಿರುವುದು ಸಮಾಜಕ್ಕೆ ಶ್ಲಾಘನೀಯನಾಗಿರುವುದು. ಇವರು ಬೆಂಗಳೂರು ಪ್ಯಾಲಿಸ್ ದರೋಗಾ ಶ್ರೀಯುತ ವೆಂಕಟಸ್ವಾಮಿ ರಾಜರವರ ಪ್ರೋತ್ಸಾಹದಿಂದ ಸಂಧ್ಯೋಪಾಸನಾವಿಧಿಯನ್ನು "The Song of Soul" ಎಂಬ ಪೆಸರಿನಲ್ಲಿ ಇಂಗ್ಲಿಷಿನಲ್ಲಿಯೂ, "ಉಪವಾಸ ಚಿಕಿತ್ಸೆ" ಯೆಂಬುದನ್ನು ತೆಲುಗಿನಲ್ಲಿಯೂ ಭಾಷಾಂತರೀಕರಿಸಿಯೂ, ಮತ್ತು ಜೀವಕಾರುಣ್ಯ ವಿಷಯಕವಾದ ಕೆಲವು ಸಣ್ಣ ಪುಸ್ತಕಗಳನ್ನು ಬರೆದು ಮುದ್ರಿಸಿರುವರು.

III. ಶ್ರೀಯುತ ಆರ್ಯ ನಾರಾಯಣ ರಾಜರೆಂಬ ಸಾಮಾಜಿಕರೋರ್ವರು ಹಿಂದೂಪುರದ ತಾಲ್ಲೂಕಾ ಪರಿಗಿಯಲ್ಲಿನ ರೆಡ್ಡಿ ಮಹಾಜನರೊಡನೆ ಕೂಡಿ ಜೀವದಯಾ ವಿಷಯಕ ಪ್ರಚಾರಕರಾಗಿರುವುದಲ್ಲದೇ ತೆಲುಗಿನಲ್ಲಿ ಈಶ್ವರಸ್ತುತಿ ಪ್ರಾರ್ಥನೋಪಾಸನವೆಂಬ ಒಂದು ಸಣ್ಣ ಪುಸ್ತಕವನ್ನು ಪ್ರಚುರಿಸಿರುವರು.

IV. ಶ್ರೀಯುತ ಮೊಹರ್ಲ ಎಚ್. ವಿ. ಮೂರ್ತಿ ಯೆಂಬ ಸಾಮಾಜಿಕರೋರ್ವರು—ನಿಮ್ಮ ಜಾತಿಯವರನ್ನು ವಿದ್ಯಾ ವಿನಯ ವಿವೇಕವುಳ್ಳವರನ್ನಾಗಿ ಮಾಡುವಿಕೆಯೂ, ಮತ್ತು ನಮ್ಮ ಎಲ್ಲಾ ಜನಾಂಗವೂ ಸಾಧಾರಣವಾಗಿ ಮದುವೆ ಮುಂತಾದವುಗಳಿಗಾಗಿಸಾಲಸೋಲಗಳನ್ನು ಮಾಡಿ ದುಂದುವೆಚ್ಚ ಪಡಿಸುವ ಬಳಿಕೆಯನ್ನು ಬಿಟ್ಟು ವೈದಿಕ ರೀತಿಯನ್ನೂ, ಮೈಸೂರು ಸಿವಿಕ್ ಅಂಡ್ ಸೋಷಿಯಲ್ ಅಸೋಸಿಯೇಷನ್ ಪದ್ಧತಿಯನ್ನೂ ಅನುಸರಿಸಿ ಜರಿಗಿಸುವಿಕೆಯೂ, ದೇಶಾಭಿವೃದ್ಧಿಗೂ ಸಂಪದಭ್ಯುದಯಕ್ಕೂ ಕಾರಣವಾದವೆಂಬಿವೇ ಮೊದಲಾದ ವಿಷಯಗಳನ್ನು ಕುರಿತು ತಾವಿದ್ದ ಸ್ಥಳಗಳಲ್ಲೆಲ್ಲಾ ಉಪನ್ಯಾಸಾದಿಗಳನ್ನು ಮಾಡುತ್ತ, ಜನಸಾಮಾನ್ಯಕ್ಕೂ ಮಿತವ್ಯಯದಲ್ಲಾಸಕ್ತಿಯುಂಟಾಗುವಂತೆ ಮಾಡುತ್ತಿರುವುದು ಸಮಾಜಕ್ಕೆ ಕೀರ್ತಿಕರವಾಗಿರುತ್ತದೆ.

V. ಮೈಸೂರು, ಕೋಲಾರ, ಕಡೂರು, ಹುಬ್ಬಳ್ಳಿ, ಶ್ರೀರಂಗಪಟ್ಟಣ, ಮರಳೂರು, ಚನ್ನರಾಯಪಟ್ಟಣ ಮುಂತಾದ ಸ್ಥಳನಿವಾಸಿಗಳಾದ ಆರ್ಯ ಕ್ಷತ್ರಿಯ ಮಹಾಶಯರನೇಕರು ೧೯೩೩ನೇ ಇಸವಿ ಜೂಲೈ ೩೦ನೇ ತಾರೀಖಿನ ದಿನ—ಶ್ರೀರಂಗ

ಪಟ್ಟಣದಲ್ಲಿ ಶ್ರೀಯುತ ಚೆನ್ನರಾಯಪಟ್ಟಣದ ಪಂಡಿತ ಪುಟ್ಟಣ್ಣನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮೈಸೂರು ಬ್ರಾಂಚ್ ಆರ್ಯಕ್ಷತ್ರಿಯ ಸಮಾಜದ ಬಾಲಕರ ಉಪಯೋಗಾರ್ಥವಾಗಿ, "ಆರ್ಯಕ್ಷತ್ರಿಯ ವಿದ್ಯಾರ್ಥಿ ಸಹಾಯಕ ನಿಧಿ" ಎಂಬುದನ್ನೊಂದನ್ನು ಸ್ಥಾಪಿಸಿ, ಇದಕ್ಕೆ ಹನಾಲ್ಬಾರ್ ಮು। ವೆಂಕಟರಾಮರಾಜರನ್ನೂ, ಟಂಬರ್ ಮರ್ಚೆಂಟ್ ವಾಸುದೇವರಾಜರನ್ನೂ ಆನರರಿ ಸೆಕ್ರೆಟರಿಗಳನ್ನಾಗಿ ನಿಯಮಿಸಿರುವುದು ಸಮಾಜಕ್ಕೆ ಪ್ರೋತ್ಸಾಹಕರವಾಗಿದೆ.

VI. ನಾಯಲ್ಬಾಡು ವಾಸ್ತವ್ಯರಾದ ಶ್ರೀಯುತ ಚಿಂತಲ ರಘುನಾಥ ರೆಡ್ಡಿ ವರ್ಮರವರು ಬಹುಕಾಲದಿಂದಲೂ ಆರ್ಯಧರ್ಮಾನುಯಾಯಿಗಳಾಗಿರುವುದಲ್ಲದೇ ದೇಶಹಿತೈಷಿಗಳಾಗಿ ತಮ್ಮ ಸ್ಥಳದಲ್ಲಿ "ಶರಣಾಲಯ" ವೆಂಬುದನ್ನೊಂದನ್ನು ಸ್ಥಾಪಿಸಿ, ನಿಮ್ನಜಾತಿ ವಿದ್ಯಾರ್ಥಿಗಳನನೇಕರನ್ನು ಸಂಸ್ಕರಿಸಿ, ತಮ್ಮ ಆಲಯದಿಂದ ಅನ್ನಪಾನಾದಿಗಳನ್ನಿತ್ತು ಪೋಷಿಸುತ್ತ, ವಿದ್ಯಾದಾನ ಮಾಡುತ್ತಲೂ, ಹಲವು ಸ್ತ್ರೀಯರನ್ನು ಪುನರ್ವಿವಾಹಿತರಾಗುವಂತೆ ಮಾಡಿಸಿಯೂ, ಆ ಪ್ರಾಂತ್ಯದ ಅನೇಕ ಗ್ರಾಮವಾಸಿಗಳಾದ ಕುಟುಂಬಿಗಳನ್ನು ಮಾಂಸಾಹಾರ ವರ್ಜಿತರೂ, ಸಾತ್ವಿಕಾಹಾರಯುಕ್ತರೂ ಆಗುವಂತೆ ಮಾಡಿಸಿಯೂ, ಇನ್ನೂ ಅನೇಕರನಂತು ಮಾಡಲು ಪ್ರಯತ್ನಿಸುತ್ತಲೂ ಸತ್ಪ್ರವರ್ತಕರಾಗಿರುವುದು ಸುಪ್ರಸಿದ್ಧವಾಗಿದೆ. ಈ ವಿಶಾಲಹೃದಯರಾದ ಉದಾರರು ಈ ನಮ್ಮ ಸಮಾಜದ ಪ್ರತಿಷ್ಠಿತ ಸಭಾಸದರಲ್ಲೊಬ್ಬರಾಗಿ ಅಲಂಕೃತರಾದುದು ಎಲ್ಲರಿಗೂ ಉತ್ತೇಜಕವಾಗಿದೆ ಎಂದು ಸಂತೋಷಪೂರ್ವಕವಾಗಿ ಶ್ರುತಪಡಿಸಲಾಗಿದೆ.

VII. ಈ ಸಮಾಜದ ಮೂಲಪುರುಷರುಗಳಲ್ಲೊರ್ವರೂ, ಮತ್ತು ಆರ್ಯ ಸ್ಟೂಡೆಂಟ್ಸ್ ಹೋಮಿನ ಸಂಸ್ಥಾಪಕರೂ ಆದ ಶ್ರೀಯುತ ಮೊಹರ್ಲ ಎಸ್. ವಿ. ಹನುಮಂತರಾಜರು ಮತ್ತು ಆವರ ಕಾರ್ಯಗಳು :—ಇವರೀ ಸಮಾಜದ ಸ್ಥಾಪನೆಗಾರಂಭವಾದ ೧೯೨೨ನೇ ವರುಷದಿಂದಲೂ, ಈ ವಿಷಯವಾಗಿ ಪರಿಶ್ರಮಿಸುತ್ತ, ಕಡೆಗೆ ಈ ಸಮಾಜೋದ್ದೇಶಗಳು ನೆರವೇರಲು ಒಂದು ಸ್ಟೂಡೆಂಟ್ಸ್ ಹೋಮನ್ನೇರ್ಪಡಿಸುವುದು ಅತ್ಯಾವಶ್ಯಕವೆಂದು ಚಿತ್ರದುರ್ಗ ಪ್ರಾಂತದ ರೆಡ್ಡಿ ಮತ್ತು ಕ್ಷತ್ರಿಯರಾಜು ಜನಗಳು ಮುಂತಾದವರೊಡನೆ ಸಮಾಲೋಚನೆಗೈದು, ಆಗ್ಗೆ ಆ ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರಾಗಿ ವಿರಾಜಿತರಾಗಿದ್ದ ಶ್ರೀಯುತ ಎಂ. ಚಂಗಯ್ಯ ಸೆಟ್ಟಿ, ಬಿ.ಎ., ಯವರ ಪ್ರೋತ್ಸಾಹವನ್ನು ಪಡೆದು, ಕೀರ್ತಿಶೇಷರಾದ ರಿಟೈರ್ಡ್ ಹೆಡ್ ಕ್ವಾರ್ಟರ್ಸ್ ಇನ್ಸ್‌ಪೆಕ್ಟರ್ ಸಿ. ಕೃಷ್ಣರಾಯರನ್ನು ತಮಗೆ ಸಹಾಯಕರನ್ನಾಗಿ ಸೇರಿಸಿಕೊಂಡು, ಚಿತ್ರದುರ್ಗ ಟೌನಿನಲ್ಲಿ ಒಂದು ಸ್ಥಳವನ್ನು ಬಾಡಿಗೆ ಏರ್ಪಡಿಸಿಕೊಂಡು, ೧೯೨೩ನೇ ಇಸವಿ ಆಗಷ್ಟು ೧೦ನೇ ತಾರೀಖಿನಲ್ಲು "ಆರ್ಯ ಸ್ಟೂಡೆಂಟ್ಸ್ ಹೋಂ" ಎಂಬ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿ ಯಥೋಚಿತ ನಡೆಸಿಕೊಂಡು ಬರುತ್ತಿದ್ದು,

೧೯೨೮ನೇ ವರುಷದ ಜನವರಿ ತಿಂಗಳಲ್ಲಿ ನಮ್ಮ ಮೈಸೂರು ಸಂಸ್ಥಾನದ ದಿವಾನ್ ಸಾಹೇಬರಾಗಿ ಅಲಂಕೃತರಾಗಿದ್ದ ಶ್ರೀಯುತ ವಿ. ಪಿ. ಮಾಧವರಾವ್, ಬಿ.ಎ. ಸಿ.ಐ.ಇ ಯವರನ್ನು ಈ ಹೋಮಿಗೆ ಸ್ವಾಗತವಂಗೈದು, ಈ ಹೋಮಿನ ಚರಿತ್ರಾಂಶವನ್ನು ವಿಸ್ತರಿಸಿ, ಅಡ್ರಸ್ಸನ್ನು ಸಮರ್ಪಿಸಿ ಸತ್ಕರಿಸಲಾಗಿ, ಆ ಮಹೋದಯರು ಈ ಹೋಮನ್ನು ಪ್ರತಿಷ್ಠಿಸಿದುದಕ್ಕೆ ತಮಗುಂಟಾದ ಸಂತೋಷ ಪ್ರದರ್ಶನವಾಗಿ ಅಪ್ಪಣೆ ಕೊಡಿಸಿದ ಹಿತೋಪದೇಶಗಳನ್ನು ಶಿರಸಾವಹಿಸಿ ತದನುಸಾರವಾಗಿ ಪ್ರಯತ್ನಿಸಿ, ಹೋಮಿನ ವಸತಿಗಾಗಿ, ಬೆಂಗಳೂರು ಒಕ್ಕಲಿಗರ ಸಂಘದ ಪ್ರಸಿಡೆಂಟರಾಗಿದ್ದ ಕೀರ್ತಿಶೇಷರಾದ ಸಾಹುಕಾರ್ ಟಿ. ಬಯ್ಯಣ್ಣನವರು, ಕೀರ್ತಿಶೇಷರಾದ ನೀಲಗಿರಿ ರಂಗೇಗೌಡರು, ಶ್ರೀಯುತ ಮಡಿಕೆರಾ ಸಬ್‌ಜಡ್ಜ್ ರಾವ್‌ಸಾಹೆಬ್ ಹೆಚ್. ಚನ್ನಯ್ಯನವರು ಮುಂತಾದ ಕೆಲವರು ಧಾರ್ಮಿಕರುಗಳ ಧನಸಹಾಯದಿಂದ ೧೦ ಗುಂಟೆ ವಿಸ್ತೀರ್ಣವುಳ್ಳ, ಸರ್ವೆ ೫೦೩ನೇ ನಂಬರು ತೋಟವನ್ನು ಕೊಂಡು ಅದರಲ್ಲಿ ಪರ್ಣಶಾಲೆಗಳನ್ನು ನಿರ್ಮಿಸಿ, ವಿದ್ಯಾರ್ಥಿಗಳನ್ನಿಟ್ಟುಕೊಂಡು ಕೆಲವು ವರುಷಗಳು ನಡೆಯಲಾಯಿತು. ವಿದ್ಯಾರ್ಥಿಗಳಿಗೆ ಪ್ರತಿದಿನವೂ ಈಶ್ವರ ಪ್ರಾರ್ಥನಾದಿಗಳಿಗುಪಯೋಗವಾಗುವಂತೆ ಚಿತ್ರದುರ್ಗದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು ಪರಮಾಂತಃಕರಣರಾಗಿ ಒಂದು ಸಾವಿರ ರೂಪಾಯಿಗಳವರೆಗೂ ಮುಟ್ಟಿಸಿ, ಒಂದು ಭಜನಾಲಯವನ್ನು ನಿರ್ಮಿಸಿಕೊಡುವಂತೆ ತಮ್ಮ ಪರಮೌದಾರ್ಯವಂ ಪ್ರಕಾಶಿಸಿ, ಈಗ್ಗೆ ಕೆಲವು ಕಟ್ಟಡವನ್ನು ಮಟ್ಟಿಗೆ ಕಟ್ಟಿಸಿರುವುದಲ್ಲದೇ ಉಳಿದುದನ್ನೂ ಅಚಿರಕಾಲದಲ್ಲಿಯೇ ಪೂರ್ಣಪಡಿಸಲುತ್ಸಿತರಾಗಿರುತ್ತಾರೆ. ಇದರಂತೆಯೇ ಜೊನ್ನಗೊಂಡನಕೆರೆ ಸಾಹುಕಾರ್ ಶ್ರೀಯುತ ಭಾರಿ ಬಸಪ್ಪ ಮುಂತ್ರಪ್ಪನವರನಾಶ್ರಯಿಸಿದುದರಿಂದ ಅವರು ವಿದ್ಯಾರ್ಥಿಗಳ ಊಟೋಪಚಾರಗಳಿಗುಪಯೋಗವಾಗಿ ಮುನ್ನೂರು ರೂಪಾಯಿಗಳನ್ನು ಮುಟ್ಟಿಸಿ ಒಂದು ಪಾಕಶಾಲೆಯನ್ನು ಕಟ್ಟಿಸಿಕೊಟ್ಟಿರುವರು. ಈ ಹೋಮಿನ ಮಿಕ್ಕ ನಿಷಯಗಳೆಲ್ಲವೂ ಆರ್ಯ ಸ್ಟೂಡೆಂಟ್ಸ್ ಹೋಮೆಂಬ ಸಣ್ಣ ಪುಸ್ತಕದಲ್ಲಿ ಪ್ರಚುರಿತವಾಗಿರುತ್ತದೆ.

ಇಂತೀ ಹೋಮಿನಲ್ಲಿ ಕೇವಲ ಕ್ಷತ್ರಿಯರು ಮಾತ್ರವಲ್ಲದೇ ಅನ್ಯಕುಲದವರ ಸಂಖ್ಯೆಯು ದಿನದಿನ ಅಭಿವೃದ್ಧಿಯಾಗತೊಡಗಿದುದರಿಂದ ಸ್ಥಲಸಂಕೋಚವಾದ ಕಾರಣ ಈ ಬಗ್ಗೆ ಹೆಚ್ಚು ಸ್ಥಲವನ್ನು ಕೊಡಿಸಿಕೊಡಬೇಕೆಂದು ಈಚೆಗೆ ನಿರಾಜಿತರಾಗಿದ್ದ ಡೆಪ್ಯುಟಿ ಕಮಿಷನರ್ ಸಿ. ಎಸ್. ಬಾಲಸುಂದರಮಯ್ಯರ್ ಬಿ. ಎ., ಯವರಲ್ಲಿ ಸೊರೆಯಿಟ್ಟುಕೊಳ್ಳಲಾಗಿ, ಆ ಮಹಾಶಯರವರ ಮನೋರಥವನೀಡೇರಿಸಿ ಕೊಡುವಂತೆ ಅಭಯವಾನವನಿತ್ತು, ಈಬಗ್ಗೆ ಒಂದು ಪಬ್ಲಿಕ್ ವಿಾಟಿಂಗನ್ನು ತಮ್ಮ ಆಧ್ಯಕ್ಷತೆಯಲ್ಲಿಯೇ ಜರಿಗಿಸಿ, ಡಿಸ್ಟ್ರಿಕ್ಟ್ ಎಕನಾಮಿಕ್ ಕಾನ್ಫರೆನ್ಸಿನಿಂದ ಆರ್ಯಸ್ಟೂಡೆಂಟ್ಸ್ ಹೋಮಿನ ಕಮಿಟಿಯನ್ನೊಂದನ್ನೇರ್ಪಡಿಸಿಸುದಲ್ಲದೇ, ಪೂರ್ವೋಕ್ತವಾದ

ಹೋಮಿನ ಸೇರಿಕೆಯಾಗಿ ಚಾಮುರಾಜೇಂದ್ರ ಮೆಮೋರಿಯಲ್ ಹಾಲಿನ ಹಿಂಭಾಗ ದಲ್ಲಿರುವ ವಿಶಾಲವಾದ ಸ್ಥಲವನ್ನು ಗೌರ್ನಮೆಂಟಿನಿಂದ ಉಚಿತವಾಗಿ ಕೊಡುವಂತೆ ಅಪ್ಪಣೆ ತರಿಸಿಕೊಟ್ಟು ಮಹದುಪಕಾರವನ್ನು ಮಾಡಿದರು. ಮೇಲ್ಕಂಡ ವಿಶಾಲವಾದ ಸ್ಥಲದಲ್ಲಿ ಕಟ್ಟಡಗಳನ್ನು ಕಟ್ಟಿಸಲು ಸಹಾಯಕರಾಗಲು ಉತ್ತೇಜಿತರಾದ ಅಡ್ವೊಕೇಟ್ ಶ್ರೀಯುತ ಎಂ. ಆನಂತಯ್ಯ ಸೆಟ್ಟರೇ ಮೊದಲಾದ ಮಹನೀಯರುಗಳನ್ನೂ ಅವರ ಔದಾರ್ಯಗಳನ್ನೂ ಕುರಿತು ಮುಂದೆ ಪ್ರತ್ಯೇಕವಾಗಿ ಉಲ್ಲೇಖಿಸಿರುವುದರಿಂದ ಅದರಿಂದ ಸುಮ್ಮಕ್ತನಾಗುವುದು. ಈಗಲೂ ಈ ಸ್ಟೂಡೆಂಟ್ಸ್ ಹೋಮಿಗೆ ಹನುಮಂತರಾಜರೇ ಯಥಾಪೂರ್ವಕ ಮ್ಯಾನೇಜರಾಗಿರುತ್ತಿರುವರು.

ಈ ಹನುಮಂತರಾಜರು ನಮ್ಮ ದೇಶಾಭ್ಯುದಯಾಭಿವೃದ್ಧಿಗೆ ನಿಮ್ಮ ಜಾತ್ಯುನ್ನರಣವೊಂದು ಸದುಪಾಯವೆಂಬ ಅಭಿಪ್ರಾಯವುಳ್ಳವರಾಗಿದ್ದುದರಿಂದ, ಇವರು ವಿದ್ಯಾಶಾಲೆಯಲ್ಲಿ ಉಪಾಧ್ಯಾಯರಾಗಿ ಸೇರಿದ ೧೯೨೨ನೇ ವರುಷದಿಂದಲೂ ತಾವು ವರ್ಗಾಯಿಸಲ್ಪಟ್ಟ ಕಡೆಯೆಲ್ಲೆಲ್ಲಾ ಹೊಲೆಯರ ಮತ್ತು ಮಾದಿಗರ ನಿಮಿತ್ತನಾಗಿ ಪಾಠಶಾಲೆಗಳನ್ನೇರ್ಪಡಿಸಿ ವಿದ್ಯಾಬುದ್ಧಿಗಳನ್ನು ಕಲಿಸುತ್ತಿದ್ದುದರಿಂದ, ಅದನ್ನು ಕಂಡು ಸಹಿಸಲಾರದ ಅದೂರದರ್ಶಿಗಳದನ್ನು ಭಂಗಪಡಿಸಲೆಳಸಿ ಇವರನ್ನು ಹಲವು ಬಗೆ ನಿರ್ಬಂಧಿಸುತ್ತಿದ್ದರು. ಇವರು ಬೊಮ್ಮಗೊಂಡನಕೆರೆಗೆ ವರ್ಗಾಯಿಸಲ್ಪಟ್ಟು ಪಂಚಮ ಬಾಲಕರಿಗೆ ಪಾಠವನ್ನು ಹೇಳುತ್ತಿರುವಲ್ಲಿ ಕೆಲವರು ದುಷ್ಟಾತ್ಮರು ಆಕಸ್ಮಿಕನಾಗಿ ಬಂದು ಇವರ ಮೇಲಿದ್ದ ಬಲಾತ್ಕರಿಸಿ ಸೆಳೆದೆಳೆದು ಹೊಡೆದು ಪೋದುದನ್ನು ರಿಪೋರ್ಟು ಮಾಡಲು ಪೋಲೀಸಿಗೆ ಹೋಗಲಾಗಿ, ಅವರು ಈ ದುಷ್ಟರಿಗೆ ಸಹಾಯಕರಾಗಿದ್ದುದರಿಂದ ಅಲ್ಲಿಯೂ ಇವರನ್ನು ತಿರುಗಿ ಹಿಂಸಿಸಿದುವಲ್ಲದೇ, ಇವರೇ ಪೋಲೀಸಿನಲ್ಲಿ ನುಗ್ಗಿ ತಪ್ಪುನ್ನೆಲ್ಲಾ ಹೊಡೆದು ಆಕ್ರಮಸಡಿಸಿದಂತೆ ಫಿರ್ಯಾದು ತಂದರಾದರೂ ಆಗ್ಗೆ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾಗಿದ್ದ [ಈಗ ಎಕ್ಸೈಸ್ ಕಮಿಷನರ್ ಪದವಿಯಲ್ಲಿ ನೆಲೆಸಿರುವ] ಶ್ರೀಯುತ ಎ. ಸುಬ್ರಹ್ಮಣ್ಯಯ್ಯರ್, ಬಿ.ಎ., ಯವರು ಈ ಮೊಕದ್ದಮೆಯನ್ನು ಆಮೂಲಾಗ್ರನಾಗಿ ವಿಚಾರಿಸಿ, ಈ ಪ್ರತಿಕಕ್ಷಿಗಳು ತಂದಿರುವ ಫಿರ್ಯಾದು ಸುಳ್ಳೆಂಬುದನ್ನು ಕಂಡರಿತು, ಅದನ್ನು ರದ್ದುಪಡಿಸಿ, ಹನುಮಂತರಾಜರು ಮಾಡಿದ್ದ ಮೊಕದ್ದಮೆಯಲ್ಲಿ ಪ್ರತಿಕಕ್ಷಿಗಳ ಮೇಲೆ ಚಾರ್ಜು ನಿರ್ಣಯಿಸಿದರಾದರೂ, ಪ್ರತಿಕಕ್ಷಿಗಳು ವಿಧೇಯರಾಗಿ ಬೇಡಿಕೊಂಡುದರಿಂದ, ಈ ಹನುಮಂತರಾಜರು ಕನಿಕರಿಸಿ ಆ ಮೊಕದ್ದಮೆಯನ್ನು ವಾಪಸು ಪಡೆದರು. ಇಂತೀ ದುಷ್ಟಜನರಿಂದುಂಟಾದ ಬಾಧೆಗಳಿಲ್ಲವೂ ಹನುಮಂತರಾಜರಿಗೆ ತಮ್ಮ ಕರ್ತವ್ಯ ವಿಷಯದಲ್ಲಿ ಮತ್ತಷ್ಟು ಉತ್ತೇಜಕವಾಗಿ ಪರಿಣಮಿಸಿದುದರಿಂದ, ಕಡೆಗೆ ಡಿಲ್ಲೀ ಕಾಫೋನ್ಸೇಷನಿನ ಜ್ಞಾಪಕಾರ್ಥವಾಗಿ ಸ್ಥಳಿಕ ಮಹಾಜನರ ಸಹಾಯಗೊಂಡು ೧೯೧೯ನೇ ವರುಷದ ಡಿಸೆಂಬರು ೧೯೨೯ನೇ ತಾರೀಖಿನಲ್ಲಿ ಚಿತ್ರದುರ್ಗದ ಆರ್ಯ ಸ್ಟೂಡೆಂಟ್ಸ್ ಹೋಮಿನ ಕಂಪೌಂಡಿನಲ್ಲಿನ ಒಂದು ಪರ್ಣಶಾಲೆ

ಯಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಶ್ರೀಯುತ ಕೆ. ಚಾಂಡಿ ಬಿ. ಎ., ಯವರ ಅಧ್ಯಕ್ಷತೆಯಲ್ಲಿ ಶ್ರೀಮನ್ಮೇರೀ ಮಹಾರಾಜ್ಞೀ ಪಂಚಮ ಸ್ಕೂಲೆಂಬುದನ್ನು ಸ್ಥಾಪಿಸಿ ಅದಕ್ಕೆ ಮಿಸೆಸ್ ಎ. ಆರ್ಬತ್ನಾಟರನ್ನು ಪ್ರಸೀಡೆಂಟರನ್ನಾಗಿ ನಿಯುಕ್ತಪಡಿಸಿ, ಇವರೇ ಮ್ಯಾನೇಜರಾಗಿ ನಡೆಸಿಕೊಂಡು ಬಂದುದಲ್ಲದೇ, ಈ ಪಾಠಶಾಲೆಯನ್ನು ಗೌರ್ಮೆಂಟ್ ವಿದ್ಯಾಭ್ಯಾಸದ ಇಲಾಖೆಗೆ ಒಪ್ಪಿಸಿ, ಚಿರಸ್ಥಾಯಿ ಪಡಿಸಲಿಕ್ಕಿ ಇಲಾಖೆಗೆ ಬಿನ್ನವಿಸಿಕೊಂಡು ಬಹು ದಿನಗಳು ನಿರೀಕ್ಷಿಸಿದರೂ ಇಷ್ಟಾರ್ಥವು ಸಿದ್ಧಿಸದೇ ವಿಳಂಬವಾದುದರಿಂದ, ನಮ್ಮನ್ನಾಳುವ ಮೈಸೂರು ಶ್ರೀಮನ್ಮಹಾರಾಜರಲ್ಲಿಯೇ ಪ್ರತ್ಯಕ್ಷವಾಗಿ ಅರಿಕೆಮಾಡಿಕೊಳ್ಳಬೇಕೆಂದು ಮಹಾಸ್ವಾಮಿಗಳು ವಾಣೀವಿಲಾಸ ಸಾಗರದ ಪರಾಂಬರಿಕೆಗೆ ಸ್ವಾರಿ ಚಿತ್ತೈಸಿದ ಸಂಗತಿಯನರಿತು ಇದು ಸುಸಮಯವೆಂದು ಈ ಹೋಮಿನಲ್ಲಿ ಮತ್ತು ಸ್ಕೂಲಿನ ವಿದ್ಯಾರ್ಥಿಗಳೊಡನೆ ಮಾರಿಕಣಿವೆಯಲ್ಲಿ ತಾದಿದ್ದು, ೧೯೧೨ನೇ ವರುಷದ ಡಿಸೆಂಬರು ತಾ|| ೧೯ರಲ್ಲಿ ಶ್ರೀಯವರ ಪಾದದರ್ಶನಂಗೈದು ಇದರ ವಿದ್ಯಮಾನವನ್ನೆಲ್ಲಾ ಸನ್ನಿಧಾನದಲ್ಲಿ ಅರಿಕೆಮಾಡಿ ಈ ಸ್ಕೂಲನ್ನು ಇಲಾಖೆಗೆ ಸೇರಿಸಿಕೊಳ್ಳುವಂತೆ ಅಪ್ಪಣೆ ಪಡೆದುದಲ್ಲದೇ, ಈ ಮಹತ್ಕಾರ್ಯಕ್ಕಾಗಿ ಮಹಾಪ್ರಭುಗಳಿಂದ ಪಾರಿತೋಷಕವಾಗಿ ಪ್ರಸಾದಿಸಲ್ಪಟ್ಟ ೧೦೦ ರೂಪಾಯಿಗಳನ್ನು ಪಡೆದು, ಆ ಬಗ್ಗೆ "ಶ್ರೀ ಕೃಷ್ಣರಾಜೇಂದ್ರನಿಧಿ" ಎಂಬ ಒಂದು ಫಂಡನ್ನೇರ್ಪಡಿಸಿ, ಆ ದ್ರವ್ಯವನದರಲ್ಲಿ ಸೇರಿಸಿ ಅದನ್ನು ವೃದ್ಧಿಪಡಿಸುತ್ತಿರುವರು.

ಈಚೆಗೆ, ಈ ಚಿತ್ರದುರ್ಗದಲ್ಲಿ ಪಂಚಮ ಬೋರ್ಡಿಂಗ್ ಹೌಸ್ ನೊಂದನ್ನು ನಿರ್ಮಿಸಬೇಕೆಂದು ೧೯೨೨ನೇ ವರುಷದ ಡಿಸೆಂಬರು ತಾ|| ೫ ರಲ್ಲಿ ಸಬ್ ಡಿವಿಜ್ಯನ್ ಆಫೀಸರ್ ಶ್ರೀಯುತ ಎಸ್. ಎನ್. ಅಪ್ಪಣ್ಣಯ್ಯಂಗಾರ್ಯರು, ಬಿ. ಎ., ಬಿ. ಎಲ್. ಎಂಬವರ ಅಧ್ಯಕ್ಷತೆಯಲ್ಲಿ ಸಭೆನಡಿಸಿ "ಚಿತ್ರದುರ್ಗದ ಡಿಸ್ಟ್ರಿಕ್ಟ್ ಪಂಚಮ ಅಸೋಸಿಯೇಷನ್" ಎಂಬ ಸಂಘವನೊಂದನ್ನು ಸ್ಥಾಪಿಸಿ, ಅದಕ್ಕೆ ಈ ಹನುಮಂತರಾಜರೇ ಸೆಕ್ರೆಟರಿಯರಾಗಿ, ಡಿಸ್ಟ್ರಿಕ್ಟಿನ ಹಲವು ಕಡೆ ಆಗಾಗ್ಗೆ ಪಂಚಮ ಕಾನ್ಫರೆನ್ಸುಗಳನ್ನು ನಡಿಸುತ್ತ, ಹಣವನ್ನು ವಸೂಲು ಮಾಡುತ್ತ ಫಂಡನ್ನು ಜತೆಗೊಳಿಸುತ್ತಿರುವರು.

ಪೂರ್ವದಲ್ಲಿ ಇವರು ಹಿಂದೆ ಹೇಳಿದ ಪ್ರಕಾರ ಅನೇಕ ಧಾರ್ಮಿಕ ಮಹಾಶಯರಿಂದ ಧನವ ನಾರ್ಜಿಸಿ ತನ್ನ ಸ್ವಾಧೀನಾನುಭವದಲ್ಲಿರುವ ಅರ್ಧ ಸ್ಕೂಡೆಂಟ್ಸ್ ಹೋಮನ್ನು ಸ್ಥಾಪಿಸಿರುವ ಜಮೀನನ್ನು ಅದರಲ್ಲಿ ಕಟ್ಟಿಸಿರುವ ಕಟ್ಟಡಗಳೊಡನೇ ಈ ಧರ್ಮ ಕಾರ್ಯಾರ್ಥವಾಗಿಯೇ ಧಾರೆಗೈಯಲು ಸಿದ್ಧಸಂಕಲ್ಪರಾಗಿರುತ್ತಾರೆ.

ಇಂತಿವರು ಕೈಗೊಂಡ ಮಹತ್ಕಾರ್ಯಗಳಿಗೆ ಎಷ್ಟು ಕಷ್ಟಗಳು ಬಂದರೂ ಅವನ್ನೆಲ್ಲಾ ಲಕ್ಷ್ಯವಿಡದೇ ಹಿಡಿದಕಾರ್ಯವನ್ನು ಸಾಧಿಸುತ್ತ ಈ ಸಮಾಜದ ಕಾರ್ಯನಿರ್ವಾಹಕ ಸಭೆಗೆ ೧೯೧೯ನೇ ವರುಷದ ಮೊದಲು ಪ್ರಸಿಡೆಂಟರಾಗಿ ನಿಯಮಿತರಾಗಿ ಯಾವಾಗಲೂ

ಪಷೋಷ ಕಾರ್ಯದಲ್ಲಿಯೇ ಪ್ರವೃತ್ತರಾಗಿ ದೇಶಹಿತವನ್ನಾಚರಿಸುವ ಇವರ ಕರ್ತವ್ಯಗಳು ನಮ್ಮ ಸಮಾಜಕ್ಕೆ ಅತ್ಯಂತ ಶ್ಲಾಘಾ ಪಾತ್ರನಾಗಿವೆ.

VIII. ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರಾದ ಚಿತ್ರದುರ್ಗದ ಆಡ್ವೊಕೇಟ್ ಶ್ರೀಯುತ ಎಂ. ಆನಂತಯ್ಯ ಸೆಟ್ಟರ ಅಂತ್ಯಂತೌದಾರ್ಯವು:— ಈ ಮಹಾಶಯರು ನಮ್ಮ ಆರ್ಯ ಸ್ಟೂಡೆಂಟ್ಸ್ ಹೋಮಿನ ಕಮಿಟಿಯಲ್ಲಿ ಒಬ್ಬರಾಗಿ ಅದರ ಪೋಷಕರಾಗಿಯೂ, ಮತ್ತು ಸಮಾಜದ ಹಿತಚಿಂತಕರಾಗಿಯೂ ವಿರಾಜಿಸುತ್ತಿರುವುದಲ್ಲದೇ ಆರ್ಯ ಸ್ಟೂಡೆಂಟ್ಸ್ ಹೋಮಿನ ಬಗ್ಗೆ ಸರಕಾರದಿಂದ ಉಚಿತನಾಗಿ ಲಭಿಸಿರುವ ಸ್ಥಲದಲ್ಲಿ, ಆರ್ಯವೈಶ್ಯ ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ ವಿದ್ಯಾರ್ಥಿನಿಲಯವನ್ನು ಕಟ್ಟಿಸುವಂತೆ ನಾಗ್ದಾನಮಾಡಿ, ಅದರಂತೆ ನೆರವೇರಿಸಲು ೧೯೨೦ ನೇ ಇಸವಿ ಆಗಸ್ಟು ತಾ॥ ೬ ರಲ್ಲೂ ಅನೇಕ ವರ್ತಕರು, ಜಮೀನ್‌ದಾರರು, ಉದ್ಯೋಗಿಗಳು ಮುಂತಾದ ಪುರನಿವಾಸಿಗಳನ್ನು ಬರಮಾಡಿಸಿ ಡಿಪ್ಯುಟಿ ಕವಿಾಷನರ್ ಮೆ॥ ಸಿ. ವೆಂಕಟರಾವ್, ಬಿ. ಎ., ಯವರ ಹಸ್ತಗಳಿಂದ ಆರ್ಯ ಸ್ಟೂಡೆಂಟ್ಸ್ ಹೋಮಿನ ಕಟ್ಟಡಕ್ಕೆ ಶಂಖಸ್ಥಾಪನೆಯು ಶಿಲಾಶಾಸನವನ್ನು ಅತ್ಯಂತ ವಿಜೃಂಭಣೆಯಿಂದ ಜರಿಗಿಸಿ ಅದುಮೊದಲು ಕಟ್ಟಡವನ್ನು ಕಟ್ಟಿಸಲಾರಂಭಿಸಿ, ಐವತ್ತು ಸಾವಿರ ರೂಪಾಯಿಗಳ ವರೆಗೂ ಮುಟ್ಟಿಸಲು ಸಂಕಲ್ಪವುಳ್ಳವರಾಗಿ ಈಗ್ಗೆ ಅರ್ಧಾಂಶಕ್ಕಿಂತಲೂ ಹೆಚ್ಚು ಕೆಲಸವನ್ನು ಮಾಡಿಸಿ ಉಳಿದುದನ್ನೂ ಕ್ಷಿಪ್ರದಲ್ಲಿಯೇ ನೆರವೇರಿಸಲು ಅತ್ಯುತ್ಸಕರಾಗಿರುವುದರಿಂದ, ಈ ಮಹೋದಯದ ಪರಮೌದಾರ್ಯವೂ, ಸ್ವಜನಾಭಿಮಾನವೂ, ಪ್ರಶಂಶನೀಯವಾದುದೆಂದು ನುಡಿಯುತ್ತ ಈ ಮಹನೀಯರಿಗೂ ಇವರ ಯಾವತ್ಕುಟುಂಬದವರಿಗೂ ಪರಮಾತ್ಮನು ದೀರ್ಘಾಯುರಾರೋಗ್ಯಾದಿಗಳನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತ ಈ ಸಾಮಾಜಿಕರೆಲ್ಲರೂ ಈ ಮಹಾಶಯರಿಗೆ ಕೃತಜ್ಞರಾಗಿರುವರು.

IX. ಆರ್ಯಸ್ಟೂಡೆಂಟ್ಸ್‌ಹೋಮಿನ ಉಪಯೋಗಕ್ಕಾಗಿ ಸಣ್ಣಸಣ್ಣ ಕಟ್ಟಡಗಳನ್ನು ಕಟ್ಟಲು ಒಪ್ಪಿಕೊಂಡಿರುವ ಮಹಾಶಯರುಗಳು :—

ಶ್ರೀಯುತ ಭರ್ಮಸಾಗರದ ಪಟೇಲ್ ತಿಮ್ಮಾರೆಡ್ಡಿಯವರು.
,, ಮುರಡೇಹಳ್ಳಿ ಪಟೇಲ್ ರಾಮರೆಡ್ಡಿಯವರು.
,, ,, ಶೇಧೆಡ್ಡಿ ತಿಮ್ಮಾರೆಡ್ಡಿಯವರು.
,, ಬರುಚಿನ ರೊಪ್ಪದ ಪಟೇಲ್ ತಿಪ್ಪಾರೆಡ್ಡಿಯವರು.
,, ದೊಡ್ಡಸಿದ್ದವ್ವನ ಹಳ್ಳಿ ಮಹಡಿ ತಿಪ್ಪೇ ರುದ್ರಪ್ಪನವರು.

ಈ ಮಹಾಶಯರು ತಮ್ಮತಮ್ಮ ಪಂಗಡದ ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ ಪ್ಲಾನನ್ನನುಸರಿಸಿ ಒಂದೊಂದು ರೂಮನ್ನು ಕಟ್ಟಿಸಲನುಮೋದಿಸಿ ಒಬ್ಬೊಬ್ಬರೂ ೫೦ ರೂಪಾ

ಯಿಗಳಂತೆ ಕಮಿಟಿಯವರ ವಶಕ್ಕೆ ಮುಂಗಡವನ್ನು ಒಪ್ಪಿಸಿರುತ್ತಾರೆ. ಇದರಂತೆಯೇ ಸಂಚಮರ ಪಂಗಡದವರ ಪೈಕಿ ಮಾ॥ ಫೋಟೊಗ್ರಾಫರ್ ದೊಡ್ಡಯ್ಯ ಜಾಂಬವ ಹನು ಮಮ್ಮ ಯೆಂಬವರೀರ್ವರೂ ಸೇರಿ ಒಂದು ರೂಮನ್ನೂ, ಚಲವಾದಿ ಮಾ॥ ಲಿಂಗಪ್ಪ ನೊಂದು ರೂಮನ್ನೂ ತಮ್ಮತಮ್ಮ ಪಂಗಡದ ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ ಕಟ್ಟಿಸಲೊಪ್ಪಿ ೫೦ ರೂಪಾಯಿಗಳಂತೆ ಕಮಿಟಿಯವರ ವಶಕ್ಕೆ ಒಪ್ಪಿಸಿರುವರು.

ಶ್ರೀಮದ್ಭಾರತ ಯುವಸಾರ್ವಭೌಮರ ಪ್ರೀತಿ ಪಾತ್ರವಾಯಿತು.

ಸ್ವನನನ್ನು ಪಡೆದ ಶ್ರೀಮತ್ಪ್ರಿನ್ಸ್ ಆಫ್ ವೇಲ್ಸ್‌ರವರು ಮೈಸೂರು ಸಂಸ್ಥಾನಕ್ಕೆ ಶುಭಾಗಮನವನ್ನು ಗೈದ ಸ್ವಾಗತ ಮಹೋತ್ಸವದ ಸುದಿನವಾದ ೧೯೦೫ನೇ ವರುಷದ ಜನವರಿ ೧೮ನೇ ತಾ॥ ದಿವಸದಲ್ಲಿ, ಈ ಚಿತ್ರದುರ್ಗದ ಆರ್ಯಕ್ಷತ್ರಿಯ ಸಾಮಾಜಿಕರಾದ ಸ್ತ್ರಿಯರೂ ಪುರುಷರೂ ವಿದ್ಯಾರ್ಥಿಗಳೂ ಮತ್ತು ಪುರವಾಸಿಗಳೂ ಸಹ ಆರ್ಕ್‌ಸ್ಟ್ರೂಡೆಂ ಟ್ಸ್ ಹೋಮಿನ ಕಂಪೌಂಡಿನಲ್ಲಿ ಸಭೆಸೇರಿ ಭಗವದುಪಾಸನಾದಿಗಳ ಮೂಲಕ ಈ ಮಹಾ ಪ್ರಭುಗಳ ಶ್ರೇಯಃಪ್ರಾರ್ಥನವನ್ನು ಮಾಡಿ ತಮ್ಮಗಳ ರಾಜಭಕ್ತಿ ವಿಶ್ವಾಸಗಳನ್ನು ತಂತೀ ವಾರ್ತೆಯ ಮೂಲಕವಾಗಿ ಬಿನ್ನವಿಸಿಕೊಳ್ಳಲಾಗಿ, ಈ ವಿಷಯವಾಗಿ ತಮಗುಂಟಾ ದ ಸಂತೋಷಾತಿಶಯ ಪ್ರದರ್ಶಕವಾಗಿ ಈ ಮಹಾ ಪ್ರಭುಗಳು ಅದೇ ತಿಂಗಳಿನ ೨೦ನೇ ತಾರೀಖು ಳಟಂಜನೇ ನಂಬರಿನ ಕೃಪಾ ಪತ್ರದ ಮೂಲಕವಾಗಿ ನಮ್ಮ ಸಮಾಜಕ್ಕೆ ದ ಯಪಾಲಿಸಿರುವುದರ ಪ್ರತಿಯನ್ನು ಇದರ ಹಿಂಭಾಗದಲ್ಲಿ ಸೂಚಿಸಿದೆ.

No. 2460

From

The Asst. to the Chief Secretary to
His Royal Highness the Prince of Wales.

To

The President,
Aryakshathriya Sabha,
Chitaldroog.

H. R. H. the Prince of Wales' Camp,
the 20th January 1922,

Sir,

I am commanded by His Royal Highness the Prince of Wales to acknowledge your telegram of 18th January 1922 and convey His Royal Highness' thanks to the members of your Sabha and the Aryan Students' Home, for their loyal message of welcome.

I have the honor to be
Sir
Your most obedient servant,
Sd. H. M. Illegible
Asst. to the Chief Secretary to
His Royal Highness the Prince of Wales.

ದೇಶಾಭ್ಯುದಯಾಭಿವೃದ್ಧಿಗೆ ಬೇಕಾದ ಸಾಧನೆಗಳು ಮತ್ತು ಅವುಗಳನ್ನು ಕುರಿತ ಸದಭಿಪ್ರಾಯಗಳು.

೧೯೨೨ನೇ ವರುಷದ ಜನವರಿ ೭ನೇ ತಾರಿಖಿನ ದಿನ ಚಿತ್ರದುರ್ಗದ ತಾಲ್ಲೂಕು ಕಾರ್ಯಾಫೀಸ್ಸಿನಲ್ಲಿ ಈ ಸಮಾಜದ ಪ್ರಸಿಡೆಂಟರಾದ ಶ್ರೀಯುತ ಮೊಹರ್ಲ ಎಸ್, ವಿ. ಹನು

ಮಂತರಾಜರು ಜನಾಂಗದ ಪುರೋವೃದ್ಧಿಗವಶ್ಯಕ್ಕವಾದ ಹತ್ತು ವಿಷಯಗಳನ್ನು ಕುರಿತು ಮಾಡಿದ ಭಾಷಣವು, ಅದೇ ೧೨ನೇ ತಾರಿಖಿನ ವೃತ್ತಾಂತ ಪತ್ರಿಕೆಯಲ್ಲಿ ಪ್ರಕಟಿತವಾಗಿರಿಸಿಯಷ್ಟೆ. ಅದರಲ್ಲಿನ ಕಡೆಯದಾದ "ಸರ್ವಜನೋಪಯೋಗವಾಗಿ ಉತ್ತರದೇಶದ ಹರಿದ್ವಾರದಲ್ಲಿನ ಗುರುಕುಲದಂತೆಯೂ, ಜಲಂಧರದ ಕನ್ಯಾ ಮಹಾ ವಿದ್ಯಾಲಯದಂತೆಯೂ, ವಾಣೀವಿಲಾಸಸಾಗರದ ವೇದವತೀ ನದೀ ತೀರದಲ್ಲಿ ಬಾಲಕರಿಗೂ ಬಾಲೆಯರಿಗೂ ವೇದಮಹಾ ಪಾಠಶಾಲೆಗಳನ್ನು ಸ್ಥಾಪಿಸಿ ಕೊಡುವುಮ ನಮ್ಮ ಮಾದರಿ ಸಂಸ್ಥಾನದ ಗೌರ್ನಮೆಂಟಿನ ಘನತೆಗೆ ಅರ್ಹವೆಂತಲೂ, ಇಂತಹ ಪಾಠಶಾಲೆಗಳದೆಸೆಯಿಂದ ಅವೈದಿಕಮತದ ಸ್ವಾರ್ಥತೆ, ದುರಾಶೆ, ದುರಭಿಮಾನ ಮುಂತಾದವು ದೂರನಾಗಿ, ಜನಗಳಲ್ಲಿ ಐಕಮತವು ನೆಲೆಗೊಂಡು, ಅದರಿಂದ ದೇಶಾಭ್ಯುದಯ ಮಹತ್ಕಾರ್ಯಗಳಲ್ಲಿ ಪ್ರವೃತ್ತಿಯೂ ಸಹ ಭ್ರಾತೃತೆಯೂ, ಸಂಪದ್ಧಿವೃದ್ಧಿಯೂ ಉಂಟಾಗುವುದು ನಿಸ್ಸಂಶಯ" ವೆಂಬ ವಿಷಯವನ್ನು ಕುರಿತು ದೇಶಹಿತಾಭಿಲಾಷಿಗಳಾದ ಅನೇಕ ಧಾರ್ಮಿಕ ಮಹಾಶಯರುಗಳು ಈ ಮಹತ್ಕಾರ್ಯವವಶ್ಯಕರಣೀಯವೂ, ಸರ್ವೋತ್ತಮವು ಆದುದೆಂದೂ, ಇದನ್ನು ಆರ್ಯಕ್ಷತ್ರಿಯಸಮಾಜವೇ ಕೈಗೊಳ್ಳತಕ್ಕುದೆಂದೂ, ಇದಕ್ಕಾಗಿ ತಮ್ಮತಮ್ಮ ಕೈಲಾದಷ್ಟು ಸಹಾಯ ಸಂಪತ್ತಿಯನೊದಗಿಸಿ ಕೊಡುತ್ತೇವೆಂದೂ, ಈ ಮಹೋದ್ದೇಶವನ್ನು ಸಾನುರಾಗದೊಡನನುಮೋದಿಸಿ, ಪ್ರೊತ್ಸಾಹಿಸುತ್ತ ಹಲವು ಪತ್ರಗಳನ್ನು ಕಳುಹಿರುವರು. ಇವುಗಳ ಸಮಾಲೋಚನಾರ್ಥವಾಗಿ, ಈ ಸಮಾಜದ ಸೆಕ್ರಿಟೆರಿಯವರ ಪ್ರತ್ರಿಕಾರತ್ನದ ನಾಮಕರಣ ಸಂಸ್ಕಾರದ ಸಮಯವಾದ ೧೯೨೨ನೇ ಮಾರ್ಚ್ ೫ನೇ ತಾರಿಖಿನ ದಿನ, ಆರ್ಯ ಸ್ಟೂಡೆಂಟ್ಸ್ ಹೋಮಿನ ಕಂಪೌಂಡಿನಲ್ಲಿ ಚಿತ್ರಮಾರ್ಗದ ಹೈಸ್ಕೂಲ್ ಹೆಡ್‌ಮಾಸ್ಟರ್ ಶ್ರೀಯುತ ಕೆ. ಸಂಜೀವಶೆಟ್ಟಿ, ಬಿ. ಎ. ಯವರು ಅಧ್ಯಕ್ಷತೆಯಲ್ಲಿ ಮಹಾ ಸಭೆಯನ್ನು ಸೇರಿಸಿ, ಆ ಪತ್ರಗಳನ್ನೆಲ್ಲಾ ಆ ಮೂಲಾಗ್ರ ಓದಿ ಸಭೆಗೆ ಶ್ರುತಪಡಿಸುತ್ತಿರುವ ಸುಸಮಯಕ್ಕೆ ಸರಿಯಾಗಿ ಚಿತ್ರದುರ್ಗದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾ ಸ್ವಾಮಿಗಳಿಂದನುಗ್ರಹೀತನಾದ ಆದೇ ೫ನೇ ತಾ॥ ೪೭೭ನೇ ನಂಬರುಳ್ಳ ಶ್ರೀಮುಖವು ಸಾಕ್ಷಿತ ಫಲ ಪುಷ್ಪಾದಿ ಮಂಗಳ ದ್ರವ್ಯಗಳೊಡನೆ ಸಭೆಯನ್ನೈದಿತು. ಅದನ್ನು ಶಿರಸಾವಹಿಸಿ ಓದಲಾಗಿ ಅದರೊಳು ಈ ಮಾಟಂಗಿಗೆ ದಯಮಾಡಿಸಲು ಕಾರ್ಯ ಬಾಹುಳ್ಯದ ದೆಸೆಯಿಂದ ಸಮಯವಿಲ್ಲವು. ಕೈಗೊಂಡಿರುವ ಕಾರ್ಯೋದ್ದೇಶವು ಅತ್ಯಂತ ಶ್ಲಾಘನೀಯವೂ ದೇಶೋನ್ನತಿಗೆ ಕಾರಣವೂ ಆಗಿರುವುದರಿಂದ-ಈ ಕಾರ್ಯಸಾಂಗವಾಗಿ ನೆರವೇರಲಿ" ಎಂದು ಆಶೀರ್ವದಿಸಲ್ಪಟ್ಟಿತ್ತು.

ಇಂತೀ ವಿಷಯಕವಾಗಿ ಬಂದ ಪತ್ರಗಳಲ್ಲಿನ ಸದಭಿಪ್ರಾಯಗಳನ್ನೆಲ್ಲಾ ಸಮಾಲೋಚಿಸಿ ಕಡೆಗೆ ಪೂರ್ವೋಕ್ತವಾದ ವಾಣೀವಿಲಾಸ ಸಾಗರದ ಬಳಿಯಣ ವೇದವತೀ ನದಿಯು ದಕ್ಷಿಣ ಹಿಂದೂಸ್ಥಾನದ ಮಧ್ಯ ರಾಷ್ಟ್ರವಾಗಿಯೂ, ಪವಿತ್ರಸ್ಥಲವಾಗಿಯೂ ಇರುವುದರಿಂದ ಆ ನದೀ ತೀರದಲ್ಲಿಯೇ ವೇದಮಹಾ ಪಾಠಶಾಲೆಗಳನ್ನು ಸ್ಥಾಪಿಸಿ ಅಪ್ಪು

ದೇಶವನ್ನು ಅನ್ವರ್ಥಪಡಿಸುವುದು ದಕ್ಷಿಣಾತ್ಯ ಭಾರತೀಯರಿಗೆಲ್ಲರಿಗೂ ಕರ್ತವ್ಯವೆಂದೂ, ಇಂತು ವೇದವಿದ್ಯೆಯನ್ನು ಪ್ರವೃತ್ತಿಗೆ ತರುವುದೇ ದೇಶೋನ್ನತಿಗೆ ಮೂಲ ಕಾರಣವೆಂದೂ ಸಭಿಕರೆಲ್ಲರೂ ಏಕ ಕಂಠ್ಯವಾಗಿ ನಿರ್ಧರಿಸಿದುದಲ್ಲದೇ ಈ ಮಹಾ ಪಾಠಶಾಲೆಗಳಿಗೆ ಭಾರತ ಯುವಸಾರ್ವಭೌಮರ ಶುಭ ನಾಮಧೇಯ ವನಿಡುವುದು ಯೋಗ್ಯವೆಂದೂ, ಈ ಬಗ್ಗೆ ಆ ಮಹಾ ಪ್ರಭುಗಳ ಅನುಮೋದನವನ್ನು ಪಡಿಯಬೇಕೆಂದೂ ತೀರ್ಮಾನಿಸಿದ ಪ್ರೊಸೀಡಿಂಗ್ಸಿನ ಪ್ರತಿಯೊಡನೆ ಫನವನ್ನು ಪಡೆದ ಶ್ರೀ ಪ್ರಿನ್ಸ್ ಆಫ್ ವೇಲ್ಸ್‌ರವರ ಸನ್ನಿಧಾನದಲ್ಲಿ ಬಿನ್ನವಿಸಿಕೊಂಡುದರಮೇಲೆ ಆ ಮಹಾ ಪ್ರಭುಗಳಿತ್ತ ಪ್ರತ್ಯುತ್ತರದ ಪ್ರತಿಯನ್ನಿದರಡಿ ಸೂಚಿಸಿರುವೆವು.

H. M. S. " Renown "

at Sea,

March 26th, 1922.

Wish reference to your letter dated the 13th instant I am desired by the Prince of Wales to express His Royal Highness's regret that it is impossible for him to comply withthe request contained therein, as the use of His Royal Highness's name is only granted in the case of institutions with which he has some special personal connection, has actually visited or of which he has performed the opening cermony.

Yours faithfully,
(Sd.) Godfrey Thomas,
Private Secretary.

To

S. V. Hanumantha Raju,
President,
Arya Kshatriya Samaj,
Chitaldroog, India.

ಈ ವಿಷಯದಲ್ಲಿ ಮೈಸೂರು ಶ್ರೀಮದ್ಯುವರಾಜರವರು, ಮೈಸೂರು ಗೌರ್ನಮೆಂಟು ಚೀಫ್ ಸೆಕ್ರೆಟರಿಯವರು, ಮೈಸೂರು ಲೇಟ್ ದಿವಾನ್ ರಾಜಸೇವಾ ಧುರೀಣ ಸರ್ ದಾರ್ ಸರ್ ಎಂ. ಕಾಂತರಾಜೇ ಅರಸಿನವರು ಅನುಗ್ರಹಿಸಿದ ಲೇಖನ ಪತ್ರಿಕೆಗಳನ್ನು ಈ ಕೆಳಗೆ ಸೂಚಿಸಿರುತ್ತೇವೆ.

GOVERNMENT OF MYSORE.

No. 498

The Palace, Bangalore,
18th March 1922.

Dear Sir,

I am directed to acknowledge receipt of the proceedings of the meeting of the Aryakshatriya Samaj held at Chitaldroog on 5th March, and to inform that His Highness was very pleased to go through the same.

Yours faithfully,
Sd. M. G. Mecry,
Personal Assistant,
to H. H. The Yuvaraja of Mysore.

To
The President,
Arya Kshatriya Samaj,
Chitaldroog.

General & Revenue Secretariat,
Dated, Bangalore 23rd March 1922.

D. O.

Sir,

I am desired by the chief secretary to acknowledge the receipt of a copy of the proceedings of the meeting

of "Aryakshatriya Samaj" held on the 5th instant, sent with your letter of the 22nd instant.

Yours truly,
Sd. C. L. Gabrial,
Personal Clerk to the Chief Secretary to Govt.

Jayalakshmi Vilas,
Mysore, Oct. 25th 1922.

Dear Sir,

I am to acknowledge with thanks receipt of your representation to Sir M. Kantharaj Urs dated 23-10-22 together with its enclosure and to state that the msvement has his full sympathy and he wishes it all success. He however regrets he is unable to comply with your request that he should accept the Presidentship of the Executive Committee of the Veda-Vidya Pracharaka Mandali.

Yours truly,
(Sd.) M. S. KRISHNAMACHAR,
Personal Asst. to Sir M. Kantharaj Urs.

To

S. V. Hanumantharaju,
President,
Arya Kshatriya Samaj,
Chitaldroog.

ಇದೇ ವಿಷಯವಾಗಿ ತಿರುಗಿ ೧೯೨೨ ನೇ ವರುಷದ ಆಕ್ಟೋಬರ್ ೧೪ ನೇ ತಾರೀಖಿನಲ್ಲಿ ಚಿತ್ರದುರ್ಗದ ಆರ್ಯ ಸ್ಕೂಡೆಂಟ್ಸ್ ಹೋಮಿನ ಕಂಪೌಂಡಿನಲ್ಲಿ ಸಬ್ ರಿಜಿಸ್ಟ್ರಾರ್ ಶ್ರೀಯುತ ಎಚ್. ವೆಂಕಟೇಶಮೂರ್ತಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ—ವೇದ ಮಹಾ ಪಾಠಶಾಲಾಪ್ರತಿಷ್ಠಾ ಮಹತ್ಕಾರ್ಯವು ನಮ್ಮ ದಕ್ಷಿಣ ಹಿಂದೂಸ್ಥಾನದ ಭಾರತೀಯರಿಗೆಲ್ಲರಿಗೂ ಸಂಬಂಧಪಟ್ಟಿರುವುದರಿಂದಲೂ, ಇದಕ್ಕೆ ಅಸಾರ ದ್ರವ್ಯವಾಗ ಬೇಕಾಗಿರುವುದರಿಂದಲೂ, ಈ ಕಾರ್ಯ ಸಿದ್ಧಿಗಾಗಿ "ದಕ್ಷಿಣಾಖಿಲ ಭಾರತೀಯ ವೇದ ವಿದ್ಯಾ ಪ್ರಚಾರಕ ಮಂಡಲಿ" ಯೆಂಬ ಸಂಘವನೊಂದನ್ನೇರ್ಪಡಿಸಿ ಪರಿಶ್ರಮಿಸತಕ್ಕುದೆಂತಲೂ ಸಭಿಕರೆಲ್ಲರಿಂದಲೂ ನಿರ್ಧರಿಸಲ್ಪಟ್ಟುದಲ್ಲದೆ ಆ ಸಂಘ ವೇರ್ಪಡಿಸುವ ಸಲುವಾಗಿ ಈ ಸಮಾಜದ ನಾಲ್ಕನೇ ಮಹಾ ಸಭೆಯನ್ನು ನೆರೆಯಿಸಬೇಕೆಂತಲೂ ತೀರ್ಮಾನಿಸಲಾಗಿದೆ.

ನಮ್ಮ ಭಾರತೀಯರಾದ ಆರ್ಯ ಧರ್ಮಾನುಯಾಯಿಗಳೆಲ್ಲರೂ ಈಗಲ ಜಾತಿ ಮತ ಭೇದಾದಿ ಕಲ್ಪಿತ ದುರಭಿಮಾನವನ್ನೊರದು ಪೂರ್ವಜರಾದ ಋಷಿಮುನಿಗಳ ಸನಾತನ ಪದ್ಧತಿಯಂತೆ ಪರಸ್ಪರ ಪ್ರೀತಿಯುಕ್ತರೂ, ಸಹಭ್ರಾತರೂ, ಸುಖ ದುಃಖಗಳಲ್ಲಿ ಭಾಗಿಗಳೂ, ಆಗಿ ಸಕಲೇಷ್ಟಾರ್ಥಗಳನ್ನೂ ಪಡೆದು ಸುಖಿಸಲುಳ್ಳ ವೇದಮಾರ್ಗವನರಿಯಲು ಸಾಧಕವಾದ ದಕ್ಷಿಣಾಖಿಲ ಭಾರತೀಯ ವೇದ ವಿದ್ಯಾ ಪ್ರಚಾರಕ ಮಂಡಲಿಯ ರಚನೆಗೆ ಸಹೃದಯರಾಗಿ ಯುಕ್ತ ಪ್ರೋತ್ಸಾಹವನಿತು ಈ ನಮ್ಮ ದೇಶವನುದ್ಧರಿಸಲು ಕಟಿಬದ್ಧರಾಗುವರೆಂದು ನಂಬಿ ನೀರಿಕ್ಷಿಸುವೆವು.

ಈ ನಮ್ಮ ಸಮಾಜದ ಉದ್ದೇಶ್ಯಗಳು ನೆರೆವೇರಲು ಸಹಾಯಕರಾಗಲುಳ್ಳ ಮಹನೀಯರುಗಳೆಲ್ಲರೂ ಆಚಿರಕಾಲದೆಲ್ಲಿಯೇ ಯಥೇಚ್ಛವಾಗಿ ಸಹಾಯ ಸಂಪತ್ತಿಯನೊದಗಿಸಿ ಕೃತಜ್ಞತೆಗೆ ಪಾತ್ರರಾಗಲು ಅತ್ಯಂತ ಪ್ರೀತಿಯಿಂದ ಬಯಸುವೆವು.

ಈ ಸಮಾಜದ ಅಭಿಮಾನಶಾಲಿಗಳೆಲ್ಲೋರ್ವರಾಗಿದ್ದ ಮೈಸೂರು ಲೇಟ್ ದಿವಾ ರಾಜಸೇವಾ ಧುರೀಣ ಸರದಾರ್ ಎಂ. ಕಾಂತರಾಜ ಅರಸ್ ಬಿ. ಎ. ಕೆ. ಸಿ. ಐ. ಇ. ಸಿ. ಎಸ್. ಐ. ರವರು ಅನಿರೀಕ್ಷಣವಾಗಿ ಪರಲೋಕವನ್ನೈದು ನಮ್ಮ ದೇಶಕ್ಕೆಯೇ ನಷ್ಟಕರವಾದುದೆಂದು ಬಹಳ ವಿಷಾದದೊಡನೆ ಬಿನ್ನವಿಸುತ್ತ ಈ ಮಹನಿಯರ ಆತ್ಮಕ್ಕೆ ಶಾಂತಿಯನ್ನಿತ್ತೂ, ಈ ಯುದಾರ ಶಿರೋಮಣಿಗಳ ಕುಟುಂಬ ವರ್ಗಕ್ಕೆ ಆಯುರಾರೋಗ್ಯ ಧೈರ್ಯೋತ್ಸಾಹಾದಿಗಳನ್ನೂ ಪ್ರಸಾದಿಸಿ ಕಾಪಾಡಲೆಂದು ಪರಮೇಶ್ವರನಲ್ಲಿ ಬೇಡುವೆವು.

ಈ ಸಮಾಜೋದ್ದೇಶಗಳ ಸಾಧನೆಗಾಗಿ ಸಹಾಯ ಸಂಪತ್ತಿಯನಿತ್ತು, ಇದನ್ನು ನೆಲೆಗೊಳಿಸಿದ ಹಿಂದೆ ಸೂಚಿಸಲ್ಪಟ್ಟಿ ಮತ್ತು ಸೂಚಿಸಲ್ಪಡದ ಉದಾರಿಗಳಾದ ಮಹಾಶಯರಿಗೆಲ್ಲರಿಗೂ ಕೃತಜ್ಞರಾಗಿ ವಂದನೆಗಳಂಗೈದು ಶ್ರೇಯೋಭಿವೃದ್ಧಿಯಂ ಬಯಸುವೆವು.

ಈ ಸಮಾಜಕ್ಕೆ ಧರ್ಮ ಭ್ರಾತೃಗಳಾಗಿ ಹಿತವನ್ನು ಬಯಸುತ್ತಲಿರುವ ಶ್ರೀಮಾನ್ ಪಂಡಿತ ಕೇಶವ ಪರವಸ್ತು, ವೆಂಕಟಕೃಷ್ಣ ರಾಮಾನುಜಾಚಾರ್ಯರಿಗೂ, ಶ್ರೀಯುತ ಪಿ. ಎಸ್. ಶೇಷಗಿರಿ ಶರ್ಮರವರಿಗೂ ಮತ್ತು ನಂದಿ ದೇಶಾಯಿ ಶೇಷಗಿರಿರಾಯರವರಿಗೂ ಸಾಮಾಜಿಕರೆಲ್ಲರೂ ಕೃತಜ್ಞತಾ ಪೂರ್ವಕ ಧನ್ಯವಾದಗಳನರ್ಪಿಸುತ್ತಿರುವರು.

ಈ ಸಮಾಜವು ಕೈಗೊಂಡಿರುವ ಉದ್ದೇಶ್ಯಗಳನ್ನೆಲ್ಲವನ್ನೂ ನೆರವೇರಿಸಿ ಕೊಟ್ಟು ಇದನ್ನು ಸಕಲ ಜನಾದರಣವಾಗುವಂತೆ ದಯಪಾಲಿಸಿ ಚಿರಸ್ಥಾಯಿಯಾಗಿ ನೆಲೆಗೊಳಿಸಿ ರಕ್ಷಿಸಲೆಂದು ಸತ್ಪ್ರೇರಕನೂ ಸರ್ವ ಸಹಾಯಕನೂ ಆದ ಸಚ್ಚಿದಾನಂದ ಪರಮಾತ್ಮನನ್ನು ಅನನ್ಯಭಕ್ತಿ ಯುಕ್ತರಾಗಿ ಪ್ರಾರ್ಥಿಸುತ್ತ ಈ ನಿವೇದಿಕೆಯನ್ನು ವಿರಮಿಸಿರುವೆವು.

ಓಮ್ ಶಾನ್ತಿ ಶಾನ್ತಿ ಶಾನ್ತಿಃ

ಇಂತು

ಚಿತ್ರದುರ್ಗ
ತಾ॥ 8 ನವೆಂಬರ್ 1923

ಚಿತ್ರದುರ್ಗದ ಆರ್ಯಕ್ಷತ್ರಿಯ ಸಮಾಜದ ಕಾರ್ಯನಿರ್ವಾಹಕ ಸಭಿಕರು.

ಶುದ್ಧಾಶುದ್ಧ ಪತ್ರಿಕೆ.

ಸ್ಥಳ	ಪುಟ	ಸಂಕ್ತಿ.	ಅಶುದ್ಧ	ಶುದ್ಧ
ಮುಖಪತ್ರದ	೧	೨	ಚಿತ್ರದುರ್ಗಪ	ಚಿತ್ರದುರ್ಗದಲ್ಲಿನ
,,	೨	೧	,,	,,
		೧೪ರ ಕೆಳಗೆ		ಆಡಿಷನಲ್ ಸೆಕ್ರಿಟರಿ ಶ್ರೀಯುತ ಬಿ. ಭೀಮರಾಜರು, ಎಂಬುದನ್ನು ೭ನೇ ಅಂಕೆಯಾಗಿ ಸೇರಿಸಿ ಉಳಿದವನ್ನು ಕ್ರಮಾಂಕವಾಗಿ ೧೩-ರವರೆಗೆಣಿಸುವುದು.
ವಿಷಯಸೂಚಿ	೨	೪	ಪ್ರಮಾಣ	ಪ್ರಮಾಣ
,,		೨೬	ಎಲ್ಲಾ	(೧) ಎಲ್ಲಾ
,,	೩	೨೨	ಉಪನಿಯಮಗಳು	ಉಪನಿಯಮಗಳು (ಸಮಾಜದ ವಿಬಂಧನಗಳು.)
,,		೨೩	೧. :—	೧. ಹೆಸರು :—
,,	೪	೨೬	ಯಥಾಸಂಭವ ಸಭಾಸದರು	ಯಥಾಸಂಭವ (ಸಾಧ್ಯವಾದಷ್ಟು) ಸಭಾಸದರು
,,		೨೮	ವಿಷಯಗಳಾನಾದರೂ	ವಿಷಯಗಳೇನಾದರೂ
,,	೫	೧	ಪ್ರತಿಷಿಕ	ಪ್ರತಿಷ್ಠಿತ
,,		೧೭	ಅಧಿಕಾರಿಗಳೆಂದು	ಅಧಿಕಾರಿಗಳೆಂದೂ
,,	೬	೨೬	೧. ಪ್ರಸಿಡೆಂಟರು	೧೪. ಪ್ರಸಿಡೆಂಟರು
,,	೭	೮	ಅನ್ತುವ	ಅವನ್ನು
,,	೮	೧೪	ಮಿಕ್ರೋಪನಿಯಮಗಳು	(ಇದನ್ನು ತೆಗೆದುಬಿಡುವುದು)
,,		೧೭	ನಿರ್ವಾಹಕ	ನಿರ್ವಾಹಕ
,,		೧೮	ವಿಷಯದಲ್ಲಿ	ವಿಷಯದಲ್ಲಾಗಲಿ
,,		೧೯	ಮೂಲಕವಾಗಿ ಸೆಕ್ರಿಟರಿ	ಮೂಲಕವಾಗಿ ತೆಗೆದುಕೊಳ್ಳತಕ್ಕು ದೆಂದು ಸೆಕ್ರಿಟರಿ
,,		೨೩	ಯದಲ್ಲಾದರೂ, ಸಭಾ	ಯದಲಾದರೂ ಸಭಾ
,,	೯	೨೦	ನ್ಯಾಯವನ್ನು	ನಾಯನನು ಹೊಂದತಕ್ಕುದು
ನಿವೇದಿಕೆಯ	(ii)	೨೦	ಪಂಗಡಗಳವರನ್ನು	ಪಂಗಡಗಳವರನ್ನೂ
,,		೨೮	ಪ್ರವೃತ	ಪ್ರವೃತ್ತ,
,,	(v)	೧೭	ಬರೆಯಾಗಿಯೂ	ಬರೆಯಾಗಿಯೂ
,,	(vii)	೫	ಆನರೆರಿ	ಹಾನರರಿ
,,		೨೬	ಕೀರ್ತಿಶೇಷರಾದ	ಕೀರ್ತಿಶೇಷರಾದ
,,		೨೮	ಬಾಡಿಗೆ	ಬಾಡಿಗೆಗೆ
,,		೨೯	ತಾರೀಖಿನಲ್ಲು	ತಾರೀಖಿನಲ್ಲಿ
,,	(viii)	೩	ಗೈದು,	ಗೈಸಿ,
,,		೧೪	ಪಡಿಸಲುತ್ತಿತ	ಪಡಿಸಲುತ್ತುಕ
,,		೨೬	ಕವಿಾಷನರ್ ಸಿ. ಎಸ್.	ಕವಿಾಷನರ್ ಶ್ರೀಯುತ ಸಿ ಎಸ್. ,
,,	(ix)	೧	ಹೋಮಿನ	ಹೋಮಿಗೆ
,,		೪	ಉತ್ತೇಜಿತ	ಉತ್ತೇಜಕ
,,		೨೩	ಪ್ರತಿಕಕ್ಕಿಗಳು	ಪ್ರತಿಪಕ್ಷಿಗಳು
,,		೨೫	ಪ್ರತಿಕಕ್ಕಿ	ಪ್ರತಿಪಕ್ಷಿ
,,	(x)	೧೭	ಪಾಂಡಸ್ಪೇರ್ಪಡಿಸಿ	ಪಾಂಡಸ್ಪೇರ್ಪಡಿಸಿ
,,		೧೭	ಹೌಸ್‌ನೊಂದನ್ನು	ಹೌಸನೊಂಧನ್ನು
,,		೨೨	ಕಾನ್ಫರಿನ್ಸು	ಕಾನ್ಫರೆನ್ಸು
,,	(xi)	೧	ಸಹೋಪಕಾರ್ಯ	ಪಹೋಕಾರ ಕಾರ್ಯ
,,		೪	ಅಂತಂತೌದಾರ್ಯವು	ಅತಂತೌದಾರ್ಯವು
,,		೧೦	ರಲ್ಲು	ರಲ್ಲಿ
,,		೧೬	ಅತ್ಯುತ್ಸಕ ಮಹೋದಯದ	ಅತ್ಯುತ್ಸುಕ ಮಹೋದಯರ
,,		೨೨	ಮಹಾಶಯರುಗಳು	ಮಹಾಶಯರುಗಳು
,,		೨೬	ಬರುಚಿನ	ಬುರುಜಿನ
,,		೨೮	ಉಪಯೋಗೌರ್ಥ	ಉಪಯೋಗಾರ್ಥ
,,	(xii)	೧೬	೪೬೦೨	೨೪೬೦
,,		೧೭	ಇಪ್ಪರ ಹಿಂಭಾಗದಲ್ಲಿ	ಇದರಲ್ಲಿ
,,	(xii)	೨೦	H. M. Illigible	H. M. (Illigible)
,,		೨೩	ಸಾಧನೆಗಳು	ಸಾಧನೆಗಳ
,,	(xiv)	೨	ತಾರೀಖಿನ ವೃತ್ತಾಂತ	ತಾರೀಖಿನ ಮೈಸೂರು ವೃತ್ತಾಂತ
,,		೧೫	ಪ್ರೊತ್ಸಾಹಿಸುತ್ತ	ಪ್ರೋತ್ಸಾಹಿಸುತ್ತ
,,		೧೯	ಬಿ. ಎ ಯವರು	ಬಿ. ಎ. ಯವರ
,,		೨೩	ಸಾಕ್ಷಿತ	ಸಾಕ್ಷಿತ
,,		೩೧	ಆಪ್ರ	ಆಪ್ರ
,,	(xviii)	೧೬	ಪ್ರೋತ್ಸಾಹವನಿಶು	ಪ್ರೋತ್ಸಾಹವನಿತ್ತು
ಮುಖಪುಟದ ಗ್ರಂಥವಿವರದ	೩	೩	ಜ್ಯೋತಿಷ	ಜ್ಯೋತಿಷ
,,		೧೨	ನಿಷೆಸನಮು	ನಿಷೇಸನಮ್ಮು
,,		೨೧	ಸಾಮಾನ್ಯಮಗಾ	ಸಾಮಾನ್ಯಮುಗಾ
,,		೨೨	ವ್ರಾಸಿಯುಂಡು ನಂಸ್ತವ್ಯಮು	ವ್ರಾಸಿಯುಂಡುಟ ನಂಸ್ತವ್ಯಮು
,,		೨೪	ನಾಯವ್ಯಕ್ತ	ನಾಯವ್ಯಕ್ತ
,,	೪	೩	ವಿಸಾ	ವಿಸ್ತಾ
,,		೯	ಅರ್ಯೋನ್ತಮಾ	ಆರ್ಯೋತ್ತಮಾ
,,		೨೦	ಗ್ರಂಥಮುಲಲು	ಗ್ರಂಥಮುಲನು

N. B:— ಬೊಮ್ಮಗೊಂಡನಕೆರೆ ಪಂಚಮ ಸ್ಕೂಲಿನ ಸಂದರ್ಭದಲ್ಲಿ ಶ್ರೀಯುತ ಕೆ. ಎಸ್. ವೀರಭದ್ರಯ್ಯ ಬಿ. ಎ. ಯವರ, ಚಿತ್ರದುರ್ಗದಲ್ಲಿ ಪಂಚಮ ಸ್ಕೂಲಿನ ಕಟ್ಟಡವನ್ನು ನಿರ್ಮಿಸುವ ಸಂದರ್ಭದಲ್ಲಿ ಶ್ರೀಯುತ ಕೆ ವ್ಯಾರ್ಥಾ ಬಿ. ಎ. ಯವರೂ ಮಾಡಿದ ಮಹೋಪಕಾರ್ಯವಿಷಯದಲ್ಲೂ—ಆರ್ಯ ಸ್ಕೂಲ್‌ಡೆಂಟ್ಸ್—ಹೋಮಿನ ಮತ್ತು ಆರ್ಯ ಕ್ಷತ್ರಿಯ ಸಮಾಜದ ವಿಷಯಗಳಲ್ಲಿ ಘನವಂ ಪಡೆದ ಮೈಸೂರು ಶ್ರೀಮದ್ಯುವರಾಜರ ತರೂ, ವಿಜಯ ನರಸತಿ ಸಂಸ್ಥಾನ ಆನೆಗೊಂದಿ ವಿದ್ಯಾನಗರ ಶ್ರೀ ರಾಜರವರೂ ದಯಪಾಲಿಸಿರುವಕೃವಾಪತ್ರಗಳೂ ನಿವೇದಿಕೆಯಲ್ಲಿ ಮುಪ್ರಣದಲ್ಲಿ ಬಿಟ್ಟು ಹೋಗಿವೆ. ಈ ಬಿಟ್ಟುಹೋದವೆಲ್ಲವೂ ಈಗ ಮುದ್ರಣವಾಗುತ್ತಿರುವ ತೆಲಗು ಮತ್ತು ಇಂಗ್ಲೀಷು ನಿವೇದಿಕೆಗಳಲ್ಲಿ ವಿಶದವಾಗುತ್ತವೆ.

వైదికాంధ్ర గ్రంథములు.

1.	ఈశ్వర రహస్యసారము	....	రూ.	1—4—0
2.	ఫలిత జ్యోతిషఖండనము	....		1—0—0
3.	భారత సూర్యోదయము	...		0 10—0
4.	తత్వజ్ఞానము	....		0-10—0
5.	స్వాత్మ నిరీక్షణము	....		0—8—0
6.	మతమతాంతర మహా సభా	...		0-10—0
7.	భక్తిపార్థనోపాసనము	...		0—8—0
8.	అగ్నిహోత్రలాభము	...		0—8—0
9.	మనుష్యజీవనము	...		0—6—0
10.	వైవాహిక ప్రహసనము	...		0—4—0
11.	మాంసభక్షణ నిషేధనము	.....		0—4—0
12.	ప్రశ్నార్ణవము	...		0—4—0
13.	న్యాయదర్శన పరిచయము	...		0-10—0
14.	కలిదర్బారు ప్రహసనము	...		0—1—0
15.	మరణ దుఃఖనివారణము	...		0-10—0
16.	స్వర్గీయమహాసభ (పురాణ సమీక్ష)	....		0-12—0

అభిప్రాయములు.

ఆర్యావర్యా!

మరణదుఃఖనివారణము అను పుస్తకము చేరి సాంగముగా జదివితిని మరణ భయము సర్వులకును సామాన్యముగానుండబట్టి ఈ విషయముగూర్చి మీరు వ్రాసియుండు నంస్తవ్యము ఇందువలన సర్వజన కృతజ్ఞతకు పాత్రులై తిరి నేనును మరణముయొక్క తత్వమును గురించి చిరకాలము యోచించుచునే యుంటిని. మీయుపమానములు నాయభిప్రాయములకు ప్రకాశమునిచ్చిన వి. ఇందుకు నేనెంతయుకృతజ్ఞుడను. మీరు యీ యస్తవ్యవిషయమును

గూర్చి దీర్ఘముగ యోచించియుండవలెనని మీ వ్రాతవలన స్పష్టముగుచున్నది. మీ చిన్నచిన్న వాక్యములు విషయములయొక్క వివర్మనాక్రమమ్ము మిక్కిలి శ్లాఘ్యమై ఇతరములగు వ్రాతనకంటె పదుమరులవిచారణశక్తిని పిసారపరచుటయందు సమర్థములైయున్నవి.

(ఇత్యాది)

T. SIVASANKARM.

నెనగొండ

(మదరాసు లెజస్లేటివ్ కౌన్సిలుమెంబరు).

ఆరోగ్యోత్తమా!

అనేక పండితులు మీ గ్రంథములను గురించి అత్యుత్తమమైన శబ్దములతో వర్ణించియున్నారు. అంతకంటె నేనేమనుచు వ్రాయుటకు నాకు తెలియదు. మీ గ్రంథములు సత్యముగా మూఢ మహారోగమును నివారించి వైదిక సిద్ధాంత వివేచనారోగ్యమును స్థిరముగ గలుగజేయుటకుప్రసిద్ధముగనొసగుఔషధముల వంటివని నా నిశ్చితాభిప్రాయమ్ము. ఇప్పుడనేక పండితులు స్వార్థచేత మానవ జీవనమార్గమంచు కంటకప్రాయమగు సిద్ధాంతములు వ్యాపింపచేయుచున్నారు గనుక మీ గ్రంథములితర్మ్రాణమున మిక్కిలి యావశ్యకములైయున్నవి.

M. ANANTHIAH SETTY,

అడ్వొకేట్, చిత్రదుర్గం.

(మైసూరు లెజస్లేటివ్ కౌన్సిల్ మెంబరు)

ఇట్లనేకపండితులు మీ గ్రంథములలను జూచి సదభిప్రాయములనిచ్చియున్నారు. కొద్దిప్రతులు శలవు. అన్నియు గొన్నవారికి పోస్టు ఖర్చు లేదు

ఆర్యనారాయణమూర్తి,

మైసూర్కాలు పండితులు,

హిందూపురం, అనంతపురంజిల్లా.

ಸಮೋಜದಿಂದ ಹ್ಷಿಪ್ರದಲ್ಲಿ ಮುದ್ರಿಸತಕ್ಕ ಗ್ರಂಥಗಳು.

---

೧. ಸ್ತ್ರೀಶೂದ್ರಾಧ್ಯಯನವಿಧಿ. ಶ್ರುತಿ, ಸ್ಮೃತಿಪ್ರಮಾಣಗಳ ಸಮೇತ.

೨. ಸಂಧ್ಯೋಪಾಸನಾವಿಧಿ. ಕನ್ನಡ ಸರಳಾರ್ಥಸಹಿತ.

೩. ಡಿಟೋ ತೆಲುಗು ಸರಳಾರ್ಥಸಹಿತ.

Rel 357

OFFICE OF THE SECRETARY TO THE GOVERNMENT OF MYSORE AND LEGISLATIVE COUNCIL.

OFFICE OF THE SECOND MEMBER OF COUNCIL
17 FEB. 1930
No. 6204

Rajamantrapravina,

C.S. Balasundram Iyer, Esq., B.A.
Second Member of Council Mysore State,
Bangalore

ಚಿಕ್ಕದುರ್ಗದ ಆರ್ಯಷ್ಟ್ರಿಯ ಸಮಾಜದ ಪ್ರೆಸಿಡೆಂಟ್ S.V. ಹನುಮಂತರಾಜು ವಿನಯಪೂರ್ವಕವಾಗಿ ವಿಜ್ಞಾಪಿಸಿಕೊಳ್ಳುವುದೇನೆಂದರೆ:—

ಮಹಾಶಯರೇ!

ಚಿಕ್ಕದುರ್ಗದ ಆರ್ಯಷ್ಟ್ರಿಯ ಸಮಾಜದವರಿಗೆ ಒಬ್ಬ ಪ್ರತಿನಿಧಿಯನ್ನು ಮೈಸೂರು ಪ್ರಜಾಪ್ರತಿನಿಧಿಸಭೆಗೆ ಆಯ್ಕೆಮಾಡಿಕೊಳ್ಳಲು ಅಧಿಕಾರವಿಲ್ಲದ್ದು ಈಗ ಕೊಂಡಲಾಂಮುವೆದಿಲ್ಲವೆಂಬುದಾಗಿ ತಾ 6.2.1930ರಲ್ಲಿ ಲಾ॥ ಕಾರ್ಯದರ್ಶಿಯವರಿಂದ ಒಂದು ಪ್ರಶ್ನೆಂ ಕಳಿಸಿರುತ್ತೆ.

ಈ ಸಂಬಂಧದಲ್ಲಿ ಈ ಸಮಾಜದ ಉದ್ದೇಶ, ಸಮಾಜದವರು ಇರುವಡೆಗೆ ಮಾಡಿರುವ ಮತ್ತು ಮಾಡುತ್ತಿರುವ ಕೆಲಸಗಳನ್ನು ಮಾವಂದರವರ ಘನವಾದ ಸೇವಾಟಾಕಿಗೆ ತರಲು ಈ ಕೆಳಗೆ ವಿಜ್ಞಾಪಿಸಿಕೊಂಡಿರುತ್ತೇವೆ.

ಸಮಾಜದ ಉದ್ದೇಶ.

ಆರ್ಯಷ್ಟ್ರಿಯ ಸಮಾಜದ ಮುಖ್ಯೋದ್ದೇಶವೆಂದರೆ ಷ್ಟ್ರಿಯ ಜನಾಂಗದಲ್ಲಿನ ಚೀಳು ಚೀಳಿವಂಗಡಗಳನ್ನು ಹೊಸಾಸನ ವಿದ್ಯಾಭಿಯ ಪ್ರಕಾರ ವಿಲೀನಮಾಡಲ್ಲಿ ಶರುವೆದ್ದು, ಅವರನ್ನು ಸಂಘಟಿಸಿ, ಸದಾಚಾರಗಳಲ್ಲಿಂದಿಗೆ ವೀರವಿಹಿತಧರ್ಮಾನುಷ್ಠಾನಕ್ಕಾಗಿ, ವಿದ್ಯೋವಂ ಶರಾಗಿ ಮಾಡುವುದು. ಮತ್ತು ಈ ಕಾರ್ಯಕಲಾಪಗಳ ಜೊತೆಯಲ್ಲಿ ದೇಶವಿಹಿತ ಕಾರ್ಯಗಳಾದ ಶೈಕ್ಷಣಿಕಾಮಾನ್ಯವಾಗಿ ಹಿಂದುಳಿದಿರುವ ಅಲ್ಪಸಂಖ್ಯಾತೋಮಿನವರ, ಅಸಿಬಡತನದಲ್ಲಿರುವ ಜನಾಂಗದ, ಮತ್ತು ಮೂಗುಜಂಗುಗಳ ಏಳಿಗೆಗೆ ಅವಕಾಶ ನೆರೆಂಲಗಳನ್ನು ಕಲ್ಪಿಸಿಕೊಡುವುದು, ಮತ್ತು ಚಾಲ್ಯವಿವಾಹ ಮಿದಿಸಿ ಪ್ರೌಢವಿವಾಹಗಳನ್ನು ಪ್ರೋತ್ಸಾಹಿಸುವುದಾಗಿರುತ್ತೆ.

ಮಾಡಿರುವ ಕೆಲಸಗಳು.

I ಈ ಸಮಾಜದವರು ಚಿಕ್ಕದುರ್ಗದ ಡಿಸ್ಟ್ರಿಕ್ಟ್‌ನ ಅದಿರರ್ಷಾಪರ ಜನಾಂಗದವರಲ್ಲಿ ಚೀರರು ಡೆಪ್ಯೂಟಿ ಕಮಿಷನರ್ ಮಿ॥ ಬಿ.ಸಿ. ಶ್ಯಾಯ್ಯಾದ್ ಕೌಜಲಗಿ ಬಹದ್ದೂರ್ ಬಿ.ವಿ. ಯವರ ಅಧಿಪತ್ಯದಲ್ಲಿ ಈ ಡಿಸ್ಟ್ರಿಕ್ಟ್‌ನ ಅದಿರರ್ಷಾಪರ ಸಂಘವೊಂದನ್ನು ಸ್ಥಾಪಿಸಿ, ಕನ್ನಾಲರ ಜನಾಂಗದೇಳಿಗೆಗಾಗಿ ಚೀಕಾದ ಕಾರ್ಯಗಳನ್ನು ಮಾಡುತ್ತಾ, ಈಗಾಗಲೇ ಸುಮಾರು ೩೦೦೦ ರೂಪಾಯಿಗಳ ವರೆಗೆ ಫಂಡು ಮಾಡಿ ಡೆಪ್ಯೂಟಿ ಕಮಿಷನರ್ ಮಿ॥ ಟಿ. ವೆಂಕಟರಂಗಂ, ಬಿ.ವಿ. ಬಿ.ಎಲ್‌ರವರ ಹಸ್ತದಿಂದ ಅದಿರರ್ಷಾಪರ ಚೋರ್ಡಿಂಗ್ ಹೋಮ್ ಕಟ್ಟಡದಲ್ಲಿ ಶಂಕುಸ್ಥಾಪನೆ ಮಾಡಿಸಲಾಗಿರುತ್ತೆ.

II ಈ ಚಿಕ್ಕದುರ್ಗದ ಡಿಸ್ಟ್ರಿಕ್ಟ್‌ನ ೬ನೇ ಒಂದು ಭಾಗ ಜನಸಂಖ್ಯೆಯುಳ್ಳ ಸಾಯಂರ ಜನಾಂಗದವರಲ್ಲಿ ಈ ಸಮಾಜದವರು ಚೀರರು ಪ್ರೋತ್ಸಾಹಿಸಿ ಡಿಸ್ಟ್ರಿಕ್ಟ್

నాయకరణంపై ఒంటిస్నాపిని రిందుటిది ఉపాంగర ఫ్లిన్ప్ర్ మీరి అవరాశాపుష్పలనళ్లను రప్పిసిరుస్తి.

III ఈ సమాజదవరు డిప్యూటీ పేశుపింపాసిచారర నంపై ఒం దస్తి డిప్యూటి రవిమాషనర్ కిలారి శేషరాద ని. వెంరపరాయుడుగార ఆధిపత్యదల్లి స్థాపిని జూప్రేమళ్లు ప్రాణివధి వహించు క్రూర దు రాచారవస్తి రప్పిసి మత్తు ముఖ్యమాన నిర్ణీత ఇచ్ఛనళ్లను అశేర రడిసళ్లు జూరిగి బరుపంపి మాండల్పట్టిది.

IV ఈ సమాజదవరు రమ్మజనగళ్ల మత్తు నర్తజనగళ్ల ఉపయోగార్థ డిప్యూటి రవిమాషనర్ మి॥ వి. రంగయ్యశెట్టి బి.ఎ. యవర అధ్యక్షతెయల్లి ఒందు పబ్లిక్ మీటింగ్ మాండి "ఆర్యన్ నేషనల్ థియేట్రికల్ కంపెనీ" పంబ అభిధానదింద ఒక్రదుగ్గదల్లి ఒందు విద్యార్థిగిళయవస్తి స్థాపిసిరువుదు, మత్తు రాజనభా భూషణరాద శ్రీ. రాంతిలీ నాజీర్ బి.ఎ. యవర, మత్తు ఊర పోస్టల్ రాగిరువ రాజు మంత్రప్రవీణ శ్రీ. మ్యాథ్యూ నాజీర్ బి.ఎ. యవర ప్రోత్సాహదిందలూ, ఈ వందరవర ఆధిపత్యదల్లి, నవరి ఆర్యన్ నేషనల్ థియేట్రికల్ కంపెనియ అభివృద్ధియ కెలసగళు ఈ సమాజదవరిం ద నడిసల్పట్టిది. మత్తు ఈ థియేట్రికల్ కంపెనియ ప్రారంభదల్లి మంబరుగళల్లొబ్బరాద అథ్యాపకర మి॥ వి. అనంతయ్య శెట్టియవరు ఋణదారు ఒందు లక్షరూపాయి చేతి చాళుత రట్టడవన్ను రట్టరువుదు ఈ సమాజద శ్రేయస్సే ప్రధానాంశవాగి నిడల్పట్టిది.

V ఈ సమాజదవరు నమ్మన్నెళుత ప్రేమర్ మహారాజా నాజీర్ బహుద్దూర్ యవరింద మేల్కండ కెలసగళ ప్రోత్సాహ ప్రత్యేక ఒందు నూరు (100) రూపాయిగళ బహుమానవన్ను పడెదవరాగిరుత్తారె.

VI ఈ ఆర్యన్ ప్రేయ సమాజదు చాల్యవివాహ ఖండిసి ప్రౌఢ వివాహగళన్ను కిలారి శేషరాద డిప్యూటి రవిమాషనర్ జరరు ద్దేశ మేల్కి నాజీర్ బి.ఎ యవర ఆధిపత్యదల్లి, డిప్యూటి రవిమాషనర్ మి॥ ఎ. వెంరపరంగం బి.ఎ. బి.ఎల్ర వ అధ్యక్షతెయల్లి నడిసిగళన్ను నడెయిసి ప్రౌఢ వివాహగళన్ను "మి॥ శారదా" రవర బళిన రశస్తవగి మాడి యుత్తరవంది రుపుదు ఎల్లా జనగళిగూ మాంగదర్శనవాగిదె.

VII ఈ సమాజద మెంబరుగళు జీవదయా ప్రస్తావనెగళన్ను, ప్రేమాద్వైతభావనెయ విది (The song of the soul) నెయిల్లి మాంసరహిత ప్రస్తావనెగళన్ను మాడుత్తా నడెదుకొండు బరుపుదు సమాజద ఉద్దేశగళన్ను విదిసల్పడిసుత్తిదె.

ఈ సమాజదవరు సభ్య అల్పవంతెయవరాగిద్దూ రూపాయి మేల్కండంతే కార్యకలాపగళన్ను మాడుత్తా, సమాజ దిలిగెయ ఖూశెయల్లి సమగ్ర జనసేవెయన్నూ, జీవదయా

కార్యనిర్వహణాధికారులు, మరియు ఇతర అధికారులందరూ ఈ సంవత్సరం ఆగస్టు నెలలో జరుగబోవు ఆంధ్ర మహాసభ ద్వితీయ మహాసభలకు ఆహ్వానించబడినారు. ఈ మహాసభలకు ఆంధ్ర ప్రాంతాలలోని ప్రతినిధులు, ప్రేక్షకులు, ఇతర ముఖ్యులు అనేకులు వచ్చి ఈ మహాసభలను జయప్రదం చేయవలసిందిగా ఈ మహాసభల అధికారులు కోరుచున్నారు. మీరు కూడా వచ్చి ఈ మహాసభలను జయప్రదం చేయవలసిందిగా కోరుచున్నాము.

ఈ మహాసభల ఉద్దేశములు మరియు అధికార నియమములు, మహాసభలకు రావలసిన ప్రతినిధులు, ప్రేక్షకుల సంఖ్య, ప్రతినిధులు ప్రేక్షకులు ఇవ్వవలసిన రుసుము, ప్రతినిధులకు ఓటు హక్కు ఇవ్వడానికి కావలసిన అర్హతలు, ఓటర్ల జాబితా తయారు చేయడానికి కావలసిన నియమాలు, ఓటర్ల జాబితాలో పేర్లు నమోదు చేయడానికి కావలసిన నియమాలు, ఓటర్ల జాబితాలో పేర్లు నమోదు చేయడానికి ఆఖరు తేదీ

I was aware of the activities of the Arya Khastriya Samaj even before I went to Chitaldrug. After my visit to Chitaldrug I was able to acquaint myself with the entire activities of the Samaj and I am glad to note below my opinions about the institution:-

I I firmly believe that the encouragement that the Backward Community in Chitaldrug District has received towards its educational progress is due entirely to the exertions of the above Samaj.

II I can say with confidence that the Samaj has been devoting all its time towards the upliftment of the Adikarnataka Community by the establishment of several schools. It gives me extreme pleasure to point out that the samaj is entirely responsible for establishing societies for the benefit of the Adikarnatakas and Naik Communities, and the Samaj is controlling and directing the affairs of these Societies.

III The Samaj had arranged for a meeting under my presidency in order to establish a hostel for the students belonging to the Reddi and other communities of the Chitaldrug District. A - building for the Students' Home known as the 'Aryan Students' Home costing a lack of rupees has already been built, and this speaks to the credit of the Samaj. The members of the Samaj have been the pioneers in ushering in ideas of post puberty marriages etc., and bringing these ideas into everyday practice.

I can boldly affirm that the members of this samaj, more than any other, have done much solid work towards social service keeping in view public service and service to the country as their guiding principles.

I emphasize that in view of the progressive activities of the Samaj, the Government of Mysore be pleased to allow them the privilege of returning a member to the Representative Assembly.

Chamarajpet, Bangalore,
9th Feb. 1930.

Sd/- M. Changiah Chetty.
Retired Deputy Commissioner.

I

II

III

I have much pleasure in endorsing the above remarks of Mr. Changiah Chetty. The Arya Kshatriya Samaj deserves registration for the work it has done, if there is any vacancy after providing for larger communities that deserves it. If not, its President, Mr. Hanumantha Raju who is one of the foremost of our public workers, and the person who, more than any one - else is responsible for the awakening among Adikarnatakas and among other Backward classes in the Chitaldrug District richly deserves nomination in his own right as a member of the Representative Assembly. As Mr. Doddiah is no more, this is all the more necessary.

Sd/- K. Chandy.

Retired Member of Council.

9th Feb. 1930.

@ @ @

I quite agree with the remarks of my distinguished predecessors in the Chitaldrug District. Mr. Hanumantha Rao has been a public worker of nearly a quarter of a century, particularly in the cause of the Arya Kshtriya Samaj. He deserves recognition and nomination to the Representative Assembly.

Bangalore.
11th Feb. 1930

Sd/- R. Nanasamy Rao.
Retired Deputy Commissioner.

. . Syed Aj eer
Offg. I. G., P. .U.

Bangalore,
Dated 14-2-[illegible].

I became acquainted with Mr.Hanumantha Raju in the Chitaldrug District in the year 1921-22. I found him a zealous worker in the cause of the Depressed Classes and I am glad that his efforts in several directions have proved successful. The organisation of his Association for his own community in addition to the work he was doing for the other communities. The strength of the community to which he belongs may be small in the Chitaldrug District yet there are many in the Taluks. If the total population of this community is considered to be small for being recognised for the purpose of representation which I am not sure of, Mr. Hanumantha Raju's labours deserve recognition by this being recommended to the Representative Assembly in his own right as a public worker. I had very good impressions of his work so long as I remained in the District as Deputy Superintendent.

(Sd) S. Syed Ajeeran,
Offg. Inspector-General of Police
in Mysore.

S. VENKATARANGAM, Esq., B.A., B.L.,
Deputy Commissioner of Income-Tax.

'Sri Varada Nivasam'
Fifth Main Street, Chamarajapet,
Bangalore, Dated 10th February 1930

I became acquainted with the working of the Chitaldrug Arya Kshatriya Samaj when I was the Deputy Commissioner of that District in the years 1925 - 26. It is owing to its initiative and resourcefulness that a fund was formed for the creation of a hostel for the depressed classes in that District.

The Samaj was also taking a very keen interest in post puberty marriages. Its exertions in bringing about the establishment of a hostel for Reddies and other classes in that District and the pains it is taking in the cause of advancement of the backward classes such as Naiks and Adikarnatakas are praiseworthy.

The Samaj therefore deserves in my opinion, recognition at the hands of Government and it may be given the privilege of returning a member to the Representative Assembly.

Sd/- S.Venkatarangam.

I fully endorse the opinions of Messrs. M. Chengiah Setty and K. Chandy. Mr. Hanumantha Raju as a manager of the Aryan Students' Home has taken great deal of trouble and has done - much self-less work for the uplift of the Backward classes in general and Adikarnatakas and Naikas in particular. I have no hesitation in saying that Mr. S. V. Hanumantha Raju, the President of the Arya Kshatriya Samaj richly deserves much encouragement at the hands of the Government. He will be very useful to the public if he is given a chance to be in the - Representative Assembly either by allowing Arya Kshatriya Samaj to return a member from their Samaj or by nomination at least by the Government.

Sd/-M. Ananthiah Setty.
A D V O C A T E.

Chitaldrug.
9th Feb.1930.

Chitaldrug.

- 6th February 1930.

I know the activities of the Arya Kshtriya Samaj of Chitaldrug ever since I was a student. This Samaj was started by the Arya Kshatriya Samaj of Chitaldrug. This samaj has been taking much interest in the advancement of education and also in social work, and it is also interested in the uplift of the Backward and Depressed classes.

Mr. S. V. Hanumantha Raju, who is the soul of this Samaj has devoted himself entirely to this movement. It was he that pursuaded my father to give me higher education. An Aryan Students' Home has been started by Mr. Ananthaiah Setty, (worth nearly 100000 of rupees.) mainly through the efforts of this samaj.

It will be a great boon to all the classes of Backward Communities if this samaj is allowed to return a member from among its members.

Sd/- J. Mahomed Imam,
Advocate,
Jagalur.

॥ ಓಂ ॥

ಚಿತ್ರದುರ್ಗದ

ಆರ್ಯಕ್ಷತ್ರಿಯ ಸಮಾಜದ ನಿವೇದಿಕೋದ್ದೇಶ್ಯ

ಮತ್ತು

ನಿಯಮೋಪನಿಯಮಗಳು.

(1892 ನೇ ವರುಷ ಪ್ರತಿಷ್ಠಿತವಾದುದು.)



ಬೆಂಗಳೂರುಸಿಟಿ.

ಟರ್ಫ್ ಮುದ್ರಾಕ್ಷರಶಾಲೆಯಲ್ಲಿ ಮುದ್ರಿತವಾದುದು.

ಮೌಲ್ಯ ೦—೨—೦] 1923. [ಪೊಸ್ಟೇಜು ೦—೧—೦

ಆರ್ಯ ಕ್ಷತ್ರಿಯ ಸಮಾಜದ

ಕಾರ್ಯನಿರ್ವಾಹಕ ಸಭಿಕರುಗಳು.

ಪ್ರಸಿಡೆಂಟರು,

೧. ಶ್ರೀಯುತ ಮೊಹರ್ಲ ಎಸ್. ವಿ. ಹನುಮಂತರಾಜರವರು,

ವೈಸ್ ಪ್ರಸಿಡೆಂಟರು,

೨. ,, ಕಲ್ಲೂಡಿ ಶ್ರೀಪತಿ ಸೀತಾರಾಮರಾಜರವರು,

ಟ್ರೆಜರರ್,

೩. ,, ಹಿಂದೂಪುರದ ಆರ್ಯನಾರಾಯಣ ಮೂರ್ತಿಯವರು,

ಲೈಬ್ರೇರಿಯರ್,

೪. ,, ಎಸ್. ಆರ್. ಸಂಜೀವಮೂರ್ತಿಯವರು,

ಜಾಯಿಂಟ್ ಸೆಕ್ರೆಟರಿಗಳು,

೫. ,, ಎಂ. ಆರ್ಯಮೂರ್ತಿಯವರು,

೬. ,, ಸುಖದೇವಶರ್ಮರವರು,

ಪ್ರತಿಷ್ಠಿತ ಸಭಾಸದರು,

೭. ,, ಬಿ. ಯ್. ವಿಜಯದೇವ ಎಂ. ಎ.ಬಾರ್-ಆಟ್-ಲಾ ಯವರು,

೮. ,, ಎಂ. ಅನಂತಯ್ಯ ಪೆಟ್ಟರು. ಆಡ್ವೋಕೇಟ್.

೯. ,, ವಾಯಲ್ಪಾಡು ಚಿಂತಲ ರಘುನಾಥರೆಡ್ಡಿ ನರ್ಸರವರು.

೧೦. ,, ಮೈಸೂರು ಟಿಂಬರ್ ಮರ್ಚೆಂಟ್ ವಾಸುದೇವರಾಜರವರು.

೧೧. ,, ನಂದನವನಂ ಬಿ. ನಾರಾಯಣರಾಜರವರು.

೧೨. ,, ಕದಿರಿ ಉಪೇಂದ್ರಂ ರಾಮರಾಜರವರು.

ಆರ್ಯಕ್ಷತ್ರಿಯ ಸಮಾಜದ ಉದ್ದೇಶ್ಯ ನಿಯಮೋಪನಿಯಮಗಳು.

ಪ್ರಧಾನ ಕಾರ್ಯಸ್ಥಾನವು—ಚಿತ್ರದುರ್ಗವು.

(1892 ನೇ ವರುಷ ಪ್ರತಿಷ್ಠಿತವಾದುದು.)

ಸಮಾಜೋದ್ದೇಶ್ಯಗಳು.

೧. ಭರತಖಂಡದಲ್ಲಿ ಸರ್ವಸಾಧಾರಣವಾಗಿ ವೇದವಿಹಿತಕರ್ಮಗಳನ್ನು ಅನುಷ್ಠಾನಕ್ಕೆ ತಂದು ವೈದಿಕಮತವನ್ನು ಸಪಿಸ್ತಾರಪಡಿಸುವುದರ ಮೂಲಕ ದೇಶಕ್ಕೆ ಹಿತವನಾಚರಿಸುವಿಕೆ.

೨. ಭಾರತೀಯರೊಳು ಕ್ಷತ್ರಿಯರಪಂಗಡಕ್ಕೆ ಸೇರಿದವರೆಂದು ಬಗೆಬಗೆನ್ಯವಪಡಿಸಲ್ಪಡುವವರು, ತಮ್ಮೊಳು ಆಂಧಪರಂಪರಾಪ್ರಾಪ್ತಗಳಾದ ನಿಷಿದ್ಧಾಚಾರಗಳನ್ನು ವರ್ಜಿಸಿ ಸದಾಚಾರಗಳಂ ಗ್ರಹಿಸುವಂತೆ ಅವರನ್ನು ಉದ್ಬೋಧಿಸುವಿಕೆ.

೩. ಕ್ಷತ್ರಿಯ ಜನಾಂಗವು ಬೇರ್ಬೇರೆ ಪಂಗಡಗಳಾಗಿರುವುದರಿಂದ ಒಂದೊಂದು ಪಂಗಡವೂ ಅಲ್ಪಸಂಖ್ಯಾವೃತವಾಗುವುದಕ್ಕೂ, ಒಂದುಪಂಗಡದವರು ಮತ್ತೊಂದು ಪಂಗಡದವರೊಡನೆಯೂ, ಕ್ರಾಯಶಃ ಒಂದು ಪಂಗಡದವರಲ್ಲಿಯೇ ಒಬ್ಬರೊಡನೆ ಮತ್ತೊಬ್ಬರೂ ಸಸಂಕ್ತಿಸಹ್ಯಪಹಾರಗಳಂ ಮಾಡುವುದಕ್ಕೂ ಸಂಕೋಚವಾಗಿರುವುದಲ್ಲದೆ, ತಮ್ಮತಮ್ಮ ಪಂಗಡಗಳಲ್ಲಿಯೇ ವಿವಾಹಗಳಾಗಲುಳ್ಳ ವರರಿಗೆ ತಕ್ಕ ವಧುಗಳೂ, ವಧುಗಳಿಗೆ ತಕ್ಕ ವರರೂ ಅನುಕೂಲಿಸುವುದು ದುರ್ಲಭವಾಗಿ ನಷ್ಟಕಷ್ಟಗಳನುಭವಿಸುತ್ತಿರುವುದು ಅನುಭವ ಸಿದ್ಧವಾಗಿದೆಯಷ್ಟೆ. ಇಂತಹ ಕುಂದುಕೊರತೆಗಳು ತೊಲಗುವ ಸಲುವಾಗಿ ಸಾಧ್ಯವಾದಮಟ್ಟಿಗೆ ಈ ಪಂಗಡಗಳನ್ನೆಲ್ಲವನ್ನೂ ಪರಸ್ಪರಬಾಂಧವ್ಯ ಸಂಬಂಧವುಳ್ಳವನ್ನಾಗಿ ಮಾಡುವುದರಮೂಲಕ ಸನಾತನ ಪದ್ಧತಿಪ್ರಕಾರವಾಗಿ ಏಕ್ಯಮತವನ್ನುಂಟುಮಾಡಲುದ್ಯೆಮಿಸುವಿಕೆ.

೪. ಕ್ಷತ್ರಿಯವಂಶಜರಾಗಲೀ, ಕ್ಷತ್ರಿಯೋಚಿತ ಗುಣಕರ್ಮಸ್ವಭಾವವುಳ್ಳ ಭಾರತೀಯರಾರೇಯಾಗಲೀ, ಯಾವಕಾರಣದಿಂದಾದರೂ ಅನ್ಯೈದಿಕಗಳಾದ ಪರಮತಗಳಿ

ಗೆ ಸೇರಿದ್ದರೂ, ಅಥವಾ ಸಹಜನಾಗಿ ಅನ್ಯಮತೀಯರೇ ಆದರೂ ತಾನಾಗಿ ಆಸೇಕ್ಷಿಸಿ ವಲ್ಲಿ ಸನುರ್ಯಕರಾದವರನ್ನು ಸಂಸ್ಕಾರಪೂರ್ವಕ ಸಮಾಜಕ್ಕೆ ಸೇರಿಸಿಕೊಳ್ಳುವಿಕೆ.

(ಅ) ಜಾತಿಮತಭೇದಗಳಿಂದುಂಟಾಗುವ ಸಾಂಘಿಕ ಸ್ನೂನತೆಗಳೂ, ನಿರ್ಬಂಧಗಳೂ ತೊಲಗುವ ನಿಮಿತ್ತನಾಗಿ ಶಾಸ್ತ್ರಪ್ರಮಾಣಯುಕ್ತಿಯುಕ್ತಗಳಾದ ಗ್ರಂಥಾದಿಗಳನ್ನು ಪ್ರಚುರಪಡಿಸುವಿಕೆ.

(ಆ) ಮನುಷ್ಯರ ಆತ್ಮಿಕೋನ್ನತಿಗೂ, ಶಾರೀರಿಕೋನ್ನತಿಗೂ, ಪ್ರಥನು ಕರ್ತವ್ಯನಾದ ಬ್ರಹ್ಮಚರ್ಯವನ್ನು ಸರ್ವಸಾಧಾರಣನಾಗಿ ಆಚರಣದಲ್ಲಿ ತರುವಿಕೆ; ಅಂದದೇ ಬಾಲಕರಿಗೂ ಬಾಲಕಿಯರಿಗೂ ಯಥಾಶಾಸ್ತ್ರನಾಗಿ ಉಪನಯನ ಸಂಸ್ಕಾರಗಳನ್ನು ಸಮಾಡಿಸಿ ನಿಯಮದಲ್ಲಿಡುವಿಕೆ; ಮತ್ತು ಇಂಥವರಿಗುಪಯುಕ್ತನಾಗಿ ವಿದ್ಯಾರ್ಥಿನಿಲಯಗಳು ಗುರುಕುಲಗಳೆಂಬ ವೈದಿಕಪಾಠಶಾಲೆಗಳೇ ಮುಂತಾದವನ್ನು ಸ್ಥಾಪಿಸುವಿಕೆ.

(ಇ) ದೇಶಾಭ್ಯುದಯ ಭಂಜಕಗಳಾದ ಬಾಲ್ಯವಿವಾಹಾದ್ಯಾಚಾರಗಳು ತೊಲಗಿ ವೈಧವಿವಾಹ ಪುನರ್ವಿವಾಹಗಳು ಸರ್ವತ್ರ ರೂಢಿಗೆ ಬರಲೂ, ಮತ್ತು ಬಳಿಕೆ ತಪ್ಪಿರುವ ಸ್ವಯಂವರವಿವಾಹ ಪದ್ಧತಿಯು ಪುನರುಜ್ಜೀವಿತನಾಗಲೂ ಪ್ರಯತ್ನಿಸುವಿಕೆ.

(ಈ) ಜನಸಾಮಾನ್ಯವೂ ಪರಸ್ಪರ ಸೌಹಾರ್ದಸಮ್ಮಾನಾದಿಗಳುಳ್ಳವರಾಗುವುದರಿಂದ ಜಾತಿ ಮತ ಭೇದಾದಿಗಳಿಲ್ಲದೇ ದೇಶದಲ್ಲಿ ಶಾಂತಿಯನ್ನು ನೆಲೆಗೊಳಿಸುವಿಕೆ;— ನಿಮ್ನ ಜಾತ್ಯುದ್ಧರಣ ಮತ್ತು ಜೀವಕಾರುಣ್ಯ ವಿಷಯಗಳಲ್ಲಿ ಪ್ರಯತ್ನಶೀಲರಾಗುವಿಕೆ.

ಇನ್ನೂ ಸಮಯೋಚಿತ ವೊದಗುವ ದೇಶಹಿತಕಾರ್ಯಗಳಲ್ಲಿ ಆಸಕ್ತರಾಗಿ, ವೈದಿಕ ಧರ್ಮದ ಅಸ್ತಿತ್ವಾರವನ್ನು ಬಲಪಡಿಸಿ ದೇಶಸೇವೆಗೈವುದೇ ಈ ಸಮಾಜದ ಮುಖ್ಯೋದ್ದೇಶಗಳು.

ನಿಯಮಗಳು.

೫. ವೇದಶಾಸ್ತ್ರಪ್ರಮಾಣ ಸಮ್ಮತನಾಗಿ ಶ್ರೀಮನ್ಮಹರ್ಷಿ ದಯಾನಂದ ಸರಸ್ವತೀಸ್ವಾಮಿಗಳು ನಿಯಮಿಸಿರುವ ದಶನಿಯಮಗಳೇ ಈ ಸಮಾಜವು ಕೈಗೊಂಡಿರುವ ಉದ್ದೇಶ್ಯಗಳಿಗೆ ಸರ್ವಾಂಶಗಳಲ್ಲಿಯೂ ಅನುಗುಣನಾಗಿರುವುದರಿಂದ, ಅವುಗಳನ್ನೇ ಈ ಸಮಾಜದ ಪ್ರಧಾನ ನಿಯಮಗಳಾಗಿ ಗ್ರಹಿಸಿ ಇವರಡಿ ಉಪ್ಕೃತಪಡಿಸಿವೆ; ಅವಾವೆಂದರೆ ;—

೧ಎಲ್ಲಾ ಸತ್ಯವಿದ್ಯೆಗಳ ಮತ್ತು ಪದಾರ್ಥವಿದ್ಯೆಗಳ ದೆಸೆಯಿಂದಾವುವು ಅವಿಯೆಲ್ಲ ಡುವುದೋ ಅವೆಲ್ಲವುದರ ಆದಿಮೂಲವು ಪರಮೇಶ್ವರನು.

(೨) ಈಶ್ವರನು ಸಚ್ಚಿದಾನಂದಸ್ವರೂಪನು, ನಿರಾಕಾರನು, ಸರ್ವಶಕ್ತಿಮಂತನು, ನ್ಯಾಯಕಾರಿಯು, ದಯಾಳುವು, ಅಜನ್ಮನು, ಅನಂತನು, ನಿರ್ವಿಕಾರನು, ಆನಾದಿಯು, ಅನುಪಮನು, ಸರ್ವಾಧಾರನು, ಸರ್ವೇಶ್ವರನು, ಸರ್ವವ್ಯಾಪಕನು, ಸರ್ವಾಂತರ್ಯಾಮಿಯು, ಅಜರನು, ಅನುಪಮನು, ನಿತ್ಯನು, ಪವಿತ್ರನು, ಸೃಷ್ಟಿಕರ್ತನೂ ಆಳುನು; ಆತನನ್ನೇ ಉಪಾಸಿಸುವಿಕೆ ಯೋಗ್ಯವು.

(೩) ವೇದವು ಸತ್ಯ ವಿದ್ಯೆಗಳ ಪುಸ್ತಕವು; ವೇದವ ಪಠನ ಪಾಠನಗಳೂ, ಶ್ರವಣ ಶ್ರಾವಣಗಳೂ ಆರ್ಯರಿಗೆಲ್ಲರಿಗೂ ಪರಮ ಧರ್ಮವು.

(೪) ಸತ್ಯವಂ ಗ್ರಹಿಸುವುದರಲ್ಲಿಯೂ, ಅಸತ್ಯವಂ ತ್ಯಜಿಸುವುದರಲ್ಲಿಯೂ, ಯಾನಾಗಲೂ ಉದ್ಯತರಾಗಿರತಕ್ಕುದು.

(೫) ಎಲ್ಲಾ ಕಾರ್ಯಗಳೂ ಧರ್ಮಾನುಸಾರವೆಂದರೇ ಸತ್ಯಾಸತ್ಯಗಳಂ ವಿಚಾರಿಸಿ ಮಾಡತಕ್ಕುದು.

(೬) ಸಂಸಾರಕ್ಕುಪಕಾರ ಮಾಡುವುದು ಈ ಸಮಾಜದ ಮುಖ್ಯೋದ್ದೇಶ್ಯವು; ಅಂದರೇ ಶಾರೀರಿಕ, ಆತ್ಮಿಕ, ಸಾಮಾಜಿಕಗಳ ಉನ್ನತಿ ಮಾಡುವಿಕೆಯು.

(೭) ಎಲ್ಲರೊಡನೆ ಪ್ರೀತಿ ಪೂರ್ವಕ ಧರ್ಮಾನುಸಾರ ಯಥಾಯೋಗ್ಯವಾಗಿ ವರ್ತಿಸ ತಕ್ಕುದು.

(೮) ಅವಿದ್ಯೆಯ ನಾಶವೂ, ವಿದ್ಯಾವೃದ್ಧಿಯೂ ಮಾಡತಕ್ಕುದು.

(೯) ಒಬ್ಬೊಬ್ಬರೂ ತಮ್ಮ ಉನ್ನತಿಯಿಂದಲೇ ಸಂತುಷ್ಟರಾಗಿರಲಾಗದು; ಇನ್ನೇನೆಂದೊಡೆ ಎಲ್ಲರ ಉನ್ನತಿಯಲ್ಲಿ ತಮ್ಮ ಉನ್ನತಿಯನ್ನು ನೆನೆಯತಕ್ಕುದು.

(೧೦) ಸರ್ವಮನುಷ್ಯರೂ ಸಾಮಾಜಿಕ ಸರ್ವಹಿತಕರ ನಿಯಮ ಪಾಲನದಲ್ಲಿ ಪರತಂತ್ರರಾಗಿರತಕ್ಕುದು; ಮತ್ತು ತನ್ನ ತಮ್ಮ ಹಿತಕರ ನಿಯಮಗಳಲ್ಲಿ ಎಲ್ಲರೂ ಸ್ವತಂತ್ರರಾಗಿರಬಹುದು.

ಉಪ ನಿಯಮಗಳು.

೧. :— ಈ ಸಮಾಜಕ್ಕೆ **"ಆರ್ಯಕ್ಷತ್ರಿಯ ಸಮಾಜ"** ಎಂದು ಹೆಸರು.

೨. **ಸಭಾಸದರು**;— ಎಲ್ಲಾ ವಂಗಡಗಳ ಕ್ಷತ್ರಿಯರಲ್ಲಿಯೂ ಪ್ರಾಪ್ತವಯಸ್ಕರಾದ ಸ್ತ್ರೀಯರೂ ಪುರುಷರೂ ಸಹ ಈ ಸಮಾಜಕ್ಕೆ ಸಭಾಸದರಾಗಬಹುದು.

ಇಂಥವರು -ಈ ಸಮಾಜೋದ್ದೇಶಗಳನ್ನೂ ನಿಯಮಗಳನ್ನೂ ಪಾಲಿಸುವುದರಲ್ಲಿ ದೃಢ ಸಂಕಲ್ಪರಾಗಿಯೂ, ಸದ್ವರ್ತನ ಸುಸ್ವಭಾವವುಳ್ಳವರೂ, ಆಸ್ತಿಕರೂ, ಧರ್ಮಾಚರಣಾ ಸಕ್ತರೂ, ಸಾತ್ವಿಕಾಹಾರ ಯುಕ್ತರೆಂದರೇ ಸರ್ವದಾ ಮಾಂಸಭಕ್ಷಣ ಮದಿರಾಪಾನಾದಿಗಳನ್ನು ವರ್ಜಿಸಿದವರೂ ಆಗಿರತಕ್ಕುದಲ್ಲದೇ ಈ ಸಮಾಜಕ್ಕೆ ಸೇರುವಾಗ ಸೆಕ್ರೆಟರಿಯವರ ಹೆಸರಿಗೆ—

"ನಾನು ಸಂತೋಷ ಪೂರ್ವಕನಾಗಿ ನಿಯಮಗಳಲ್ಲಿ ನಿರ್ದೇಶಗಳಾದ ಆರ್ಯಕ್ಷತ್ರಿಯ ಸಮಾಜೋದ್ದೇಶಗಳಿಗನುಕೂಲವಾದ ಆಚರಣೆಗಳನ್ನು ಸ್ವೀಕರಿಸುತ್ತೇನೆಯಾಗಿ ನನ್ನನ್ನು ಸಮಾಜದ ರಿಜಿಸ್ಟರಿನಲ್ಲಿ ಸಭಾಸದನನ್ನಾಗಿ ದಾಖಲು ಮಾಡಿಕೊಂಡು ಅಂಗೀಕಾರ ಪತ್ರವನ್ನು ಕಳುಹಿಸತಕ್ಕುದು" ಎಂದು ತಮ್ಮ ಹೆಸರು ವಿಳಾಸಾದಿ ವಿವರಗಳನ್ನು ಬರೆದು ರೂ. ೧--೧--೦ ಪ್ರವೇಶ ಧನವನ್ನು ಸೇರಿಸಿ ಆಪ್ಲಿಕೇಷನ್ ಕೊಡತಕ್ಕುದು.

೩. ಸಭಾಸದರಾದವರು ತಮ್ಮ ಆದಾಯದಲ್ಲಿ ಶತಾಂಶವನ್ನೋ ಅಥವಾ ಅದಕ್ಕಿಂತಲೂ ಅಧಿಕವನ್ನೋ ಮಾಸಮಾಸವೋ ವರುಷಕೊಮ್ಮೆಯೋ ಸಮಾಜಕ್ಕೆ ಸಲ್ಲಿಸತಕ್ಕುದು. ಆದರೇ ರಾಜರುಗಳು, ಭೂಸ್ವಾಮಿಗಳು, ಧನಾಢ್ಯರು ಮುಂತಾದವರು ಸದ ಶತಾಂಶವನ್ನೇ ಕೊಡಬೇಕಾದುದಿಲ್ಲ. ಒಂದೇ ಸಾರಿಯಾಗಲೀ ತಿಂಗಳು ತಿಂಗಳಿಗಾಗಲೀ ಪ್ರತಿ ಸಂವತ್ಸರದಲ್ಲಾಗಲೀ ತಮ್ಮ ಉತ್ಸಾಹವಿದ್ದಷ್ಟು ಕೊಡುಬಹುದು.

೪. ಈ ಸಮಾಜದ ಉದ್ದೇಶಗಳಿಗೂ ನಿಯಮಗಳಿಗೂ ವಿರುದ್ಧನಾಗಿ ವರ್ತಿಸುವರು ಈ ಸಭಾಸದರಾಗಲಾರರು.

ವಿಶೇಷಾಂಶ--ಸಭಾಸದರಾಗಲು ಬಂದ ಆಪ್ಲಿಕೇಷನುಗಳೊಳು ಅಂಗೀಕಾರವಾಗದವನ್ನು ಕಾರಣವಂ ತಿಳಿಸದೆಯೇ ನಿರಾಕರಿಸಲೂ, ಯಾವ ವಿಶೇಷ ಕಾರಣದಿಂದಾದರೂ ಚಂದಾ ಕೊಡದವರನ್ನು ಸಭಾಸದರನ್ನಾಗಿ ಸೇರಿಸಿ ಕೊಳ್ಳಲೂ ಕಾರ್ಯನಿರ್ವಾಹಕ ಸಭೆಗಧಿಕಾರವುಂಟು.

ಸಭೆಗಳು.

೫: ಸಾಪ್ತಾಹಿಕ ಸಭೆ ನಾರ್ಷಿಕ ಮಹಾಸಭೆ ನೈಮಿತ್ತಿಕ ಮಹಾಸಭೆಯೆಂಬ ಸಭೆಗಳು ಮೂರು ತೆರನಾದುವು. ಇವುಗಳೊಳು (೧) ವಾರಕ್ಕೊಂದು ಸಾರಿ ನಿಯಮಿತ ಕಾಲಕ್ಕೆ ಯಥಾಸಂಭವ ಸಭಾಸದರು ಸಮಾವೇಶನವಾಗಿ ಭಗವತ್ಸ್ತಾರ್ಥನಾದಿಗಳನ್ನು ಮಾಡುವುದು ಸಾಪ್ತಾಹಿಕ ಸಭೆಯೆನ್ನಲ್ಪಡುವುದು. ಈ ಸಭೆಯಲ್ಲಿ ಸಮಾಜ ಸಂಬಂಧವಾದ ಮುಖ್ಯ ವಿಷಯಗಳಾವಾದರೂ ಇದ್ದಲ್ಲಿ ತಿಳಿಸಬಹುದು. (೨) ಸಮಾಜದ ವಾರ್ಷಿ

ಕೋತ್ಸವನವನ್ನು ಜರಿಗಿಸುವುದಕ್ಕೂ ಕಾರ್ಯನಿರ್ವಾಹಕ ಸಭೆಗೆ ಜೇಕಾದ ಪ್ರತಿಷ್ಠಿಕ ಸಭಾ ಸದರನ್ನೂ ಅಧಿಕಾರರನ್ನೂ ಚುನಾಯಿಸಿಕೊಳ್ಳುವುದಕ್ಕೂ, ಸಮಾಜದ ಗತವರ್ಷದ ವೃತ್ತಾಂತವನ್ನೂ ಮುಂದಕ್ಕೆ ಅವಶ್ಯಗಳಾದ ಕಾರ್ಯಗಳು ಮುಂತಾದವನ್ನೂ ತಿಳಿಸುವುದಕ್ಕಾಗಿಯೂ ಎಲ್ಲಾ ಸಭಾಸದರೊಡನೆಯೂ ಪ್ರತಿಷ್ಠಿತ ಪುರುಷರು, ವಿದ್ವಜ್ಜನರು, ಮುಂತಾದವರೊಡನೆಯೂ ವರುಷಕ್ಕೊಂದುಸಾರಿ ಸಮಾವೇಶವಾಗುವುದು ವಾರ್ಷಿಕ ಮಹಾಸಭೆಯೆನ್ನಲ್ಪಡುವುದು. ಈ ಸಭೆ ನಡಿಯುವ ಸ್ಥಲ ಕಾಲ ಮುಂತಾದವು ಒಂದು ತಿಂಗಳಿಗೆ ಮುಂಚೆಯೇ ತಿಳಿಸಲ್ಪಡತಕ್ಕುದು. (೩) ಯಾವುನಾದರೂ ವಿಶೇಷ ನಾದ ಸಂದರ್ಭವುಂಟಾಗಿ ಪ್ರಸಿಡೆಂಟರೂ, ಸೆಕ್ರಿಟರಿಗಳೂ ಕೋರಿದಾಗಲೂ, ಕಾರ್ಯನಿರ್ವಾಹಕ ಸಭೆ ಕೋರಿದಾಗಲೂ, ಸಭಾಸದರಲ್ಲಿ ಐದರಲ್ಲೊಂದರಷ್ಟು ಜನರು ಸೆಕ್ರಿಟರಿಯವರಿಗೆ ಬರಿಮಕೊಂಡಾಗಲೂ ಸಭಾಸದರಿಲ್ಲರೂ ಸಮಾವೇಶವಾಗುವುದು ನೈಮಿತ್ತಿಕ ಮಹಾಸಭೆಯೆನ್ನಲ್ಪಡುವುದು. ಇದು ಜರುಗುವ ಕಾಲ ಮುಂತಾದವು ಸಮುಯೋಚಿತನಾಗಿ ಮುಂಚೆಯೇ ತಿಳಿಸಲ್ಪಡತಕ್ಕುದು.

ಕಾರ್ಯನಿರ್ವಾಹಕ ಸಭೆ.

೬. ಸಮಾಜದ ಸಮಸ್ತ ಕಾರ್ಯಗಳನ್ನೂ ನೆರವೇರಿಸುವ ಸಲುವಾಗಿ ಪ್ರಸಿಡೆಂಟ್, ವೈಸ್ ಪ್ರಸಿಡೆಂಟ್, ಸೆಕ್ರಿಟರಿ, ಟ್ರೆಜರರ್, ಲೈಬ್ರೇರಿಯರ್ ಎಂಬುವರೊಡಗೂಡಿದ ಒಂದು ಕಾರ್ಯನಿರ್ವಾಹಕ ಸಭೆಯು ನಿಯಮಿಸಲ್ಪಡತಕ್ಕುದು. ಈ ಸಭೆಯೇ ಅಂತರಂಗಸಭೆಯೆಂದೂ ಮತ್ತು ಈ ಪದವಿಗಳುಳ್ಳವರೇ ಅಧಿಕಾರಿಗಳೆಂದು ಹೇಳಲ್ಪಡುವರು. ಇವರೊಳು ಸೆಕ್ರಿಟರಿ, ಟ್ರೆಜರರು, ಲೈಬ್ರೆರಿಯರ್ ಎಂಬ ಅಧಿಕಾರಗಳಲ್ಲಿ ಅವಶ್ಯನಾಗಿದ್ದಲ್ಲಿ ಒಬ್ಬರಿಗಿಂತಲೂ ಹೆಚ್ಚು ಜನರನ್ನು ನಿಯಮಿಸಿಕೊಂಡು ಅವರವರಿಗೆ ತಕ್ಕಂತೆ ಕೆಲಸಗಳನ್ನು ಹಂಚಿಕೊಳ್ಳತಕ್ಕುದು. ಮತ್ತು ಈ ಸಭೆಗೆ ಅವಶ್ಯಕಗಳಾದ ಸಂದರ್ಭಗಳಲ್ಲಿ ಪ್ರತಿನಿಧಿಗಳನ್ನೂ ಪ್ರತಿಷ್ಠಿತ ಪುರುಷರನ್ನೂ ಸಭಾಸದರನ್ನಾಗಿ ತನ್ನ ಸಹಾಯಕ್ಕೆ ಸೇರಿಸಿಕೊಳ್ಳಬಹುದು.

೭. ವರುಷಕ್ಕೊಳಗಾಗಿಯೇ ಪ್ರತಿಷ್ಠಿತರ ಅಥವಾ ಅಧಿಕಾರಿಗಳ ಸ್ಥಾನವು ಖಾಲಿಯಾದಲ್ಲಿ ಅದನ್ನು ಕಾರ್ಯನಿರ್ವಾಹಕ ಸಭೆಯೇ ಮತ್ತೊಬ್ಬ ಯೋಗ್ಯಪುರುಷರನ್ನು ನಿಯಮಿಸಿಕೊಳ್ಳಬಹುದು. ಅಥವಾ ಆಸ್ಥಾನವನ್ನು ರಿಕ್ತವಾಗಿಯಾದರೂ ಇಡಬಹುದು.

